# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : 2021-22ನೇ ಸಾಲಿನಲ್ಲಿ ಬೆಳೆ ಸಮೀಕ್ಷೆ ಯೋಜನೆಯನ್ನು ಅನುಷ್ಠಾನಗೊಳಿಸುವ ಬಗ್ಗೆ.

ಓದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ:ಕೃಇ/34/ಕೃಕೈಉ/2019, ಬೆಂಗಳೂರು, ದಿನಾಂಕ:05.07.2019 ಮತ್ತು ಸರ್ಕಾರದ ಆದೇಶ ಸಂಖ್ಯೆ:ಕೃಇ/83/ಕೃಕೈಉ/2020, ದಿನಾಂಕ:07.08.2020.
2. ಕೃಷಿ ಆಯುಕ್ತರ ಅನಧಿಕೃತ ಟಿಪ್ಪಣಿ ಸಂಖ್ಯೆ:ಬೆಸವಿ/01/2021-22, ದಿನಾಂಕ:10.05.2021.

*****

**ಪ್ರಸ್ತಾವನೆ:**

ರಾಜ್ಯದಲ್ಲಿ, 2017 ಕ್ಕಿಂತ ಪೂರ್ವದಲ್ಲಿ, ಬೆಳೆ ವಿಸ್ತೀರ್ಣದ ಅಂಕಿ ಅಂಶಗಳ ಅಂದಾಜು ಕಾರ್ಯವನ್ನು ಕೃಷಿ ಇಲಾಖೆ, ಕಂದಾಯ ಇಲಾಖೆ, ತೋಟಗಾರಿಕೆ ಇಲಾಖೆ, ರೇಷ್ಮೆ ಇಲಾಖೆ, ಮತ್ತು ಜಲಸಂಪನ್ಮೂಲ ಇಲಾಖೆಯ ಸಿಬ್ಬಂದಿಯನ್ನೊಳಗೊಂಡ ತಂಡವು ಭೌತಿಕವಾಗಿ ನಿರ್ವಹಿಸುತ್ತಿತ್ತು. ಇದರಿಂದ ಕೆಲವು ವೇಳೆ ನಿಖರವಾದ ಮಾಹಿತಿಯನ್ನು ಪಡೆಯಲಾಗುತ್ತಿರಲಿಲ್ಲ. ಆದ್ದರಿಂದ ಪರಿಣಾಮಕಾರಿಯಾದ ಸರ್ವೆವಾರು/ಉಪ ಸರ್ವೆ ನಂಬರ್ ವಾರು/ಹಿಸ್ಸಾವಾರು ಬೆಳೆ ಮಾಹಿತಿಯನ್ನು ಪಡೆಯಲು ಸೂಕ್ತ ವ್ಯವಸ್ಥೆಯನ್ನು ಕಲ್ಪಿಸುವುದು ಅವಶ್ಯಕವಾಗಿತ್ತು.

ಅದರಂತೆ, ಸರ್ವೆ ನಂಬರ್/ಹಿಸ್ಸಾ ನಂಬರ್‌ವಾರು ಬೆಳೆ ಮಾಹಿತಿ ಸಂಗ್ರಹಣೆ ಹಾಗೂ ನಿಖರ ದತ್ತಾಂಶದ ಅಲಭ್ಯತೆಯ **ಸಮಸ್ಯೆಗಳನ್ನು** ನಿವಾರಿಸಲು, 2017ರ ಮುಂಗಾರು ಹಂಗಾಮಿನಲ್ಲಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ(ಇ-ಆಡಳಿತ)ಯು ಅಭಿವೃದ್ಧಿಪಡಿಸಿದ್ದ ಮೊಬೈಲ್ ತಂತ್ರಾಂಶದ ಬಳಕೆಯಿಂದ ಬೆಳೆ ಸಮೀಕ್ಷೆ ಕಾರ್ಯಕ್ಕೆ ಪ್ರಯತ್ನಿಸಲಾಯಿತು. ಸದರಿ ಕಾರ್ಯವನ್ನು ಮುಂಗಾರು 2018 ರಲ್ಲಿ ಆಯಾ ಗ್ರಾಮದ ಖಾಸಗಿ ನಿವಾಸಿಗಳಲ್ಲಿ ತಂತ್ರಾಂಶದ ಜ್ಞಾನವುಳ್ಳ ಯುವಕರು (ಪಿ.ಆರ್-ಪ್ರೈವೇಟ್ ರೆಸಿಡೆಂಟ್ಸ್) ಮತ್ತು ಸರ್ಕಾರಿ ಸಿಬ್ಬಂದಿಗಳ ಸೇವೆಯನ್ನು ಬಳಸಿಕೊಂಡು ಕೈಗೊಳ್ಳಲಾಯಿತು.

ಮೇಲೆ ಓದಲಾದ ಕ್ರಮಾಂಕ(1)ರ ಸರ್ಕಾರದ ಆದೇಶಗಳಲ್ಲಿ, 2019-20 ಮತ್ತು 2020-21ನೇ ಸಾಲುಗಳಲ್ಲಿ ಕ್ರಮವಾಗಿ ರಾಜ್ಯದಲ್ಲಿ ಕೃಷಿ ಇಲಾಖೆಯ ಮುಖಾಂತರ ಜಿಲ್ಲಾಧಿಕಾರಿಗಳ ನೇರ ಉಸ್ತುವಾರಿಯಲ್ಲಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ (ಇ-ಆಡಳಿತ) ಇಲಾಖೆಯ "ಬೆಳೆ ಸಮೀಕ್ಷೆ ಮೊಬೈಲ್ ಆ್ಯಪ್" ಬಳಸಿ ಆಯಾ ಗ್ರಾಮದಲ್ಲಿ ಲಭ್ಯವಿರುವ ಮಾಹಿತಿ ತಂತ್ರಜ್ಞಾನದ ಬಗ್ಗೆ ತಿಳುವಳಿಕೆ ಇರುವ ಯುವಕರ ಸೇವೆಯನ್ನು (ಖಾಸಗಿ ನಿವಾಸಿ) ಮತ್ತು ಇಲಾಖಾ ಸಿಬ್ಬಂದಿಗಳನ್ನು ಬಳಸಿಕೊಂಡು ಪೂರ್ವ ಮುಂಗಾರು, ಮುಂಗಾರು, ಹಿಂಗಾರು ಮತ್ತು ಬೇಸಿಗೆ ಹಂಗಾಮುಗಳ ಬೆಳೆ ಸಮೀಕ್ಷೆಯನ್ನು ಕೈಗೊಳ್ಳಲು ಅನುಮತಿ ನೀಡಿ ಆದೇಶಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮಾಂಕ(2)ರ ಅನಧಿಕೃತ ಟಿಪ್ಪಣಿಯಲ್ಲಿ, ಕೃಷಿ ಆಯುಕ್ತರು, 2021-22ನೇ ಸಾಲಿನಲ್ಲಿ ಕಳೆದ ಸಾಲಿನಂತೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ(ಇ-ಆಡಳಿತ) ರವರ ಚಾಲ್ತಿ ಮೊಬೈಲ್ ಆಪ್ ಬಳಸಿಕೊಂಡು ಪೂರ್ವ ಮುಂಗಾರು, ಹಿಂಗಾರು ಹಾಗೂ ಬೇಸಿಗೆ ಹಂಗಾಮುಗಳಲ್ಲಿ ಬೆಳೆ ಸಮೀಕ್ಷೆಯನ್ನು ಕೈಗೊಳ್ಳಲು, ಮಾನ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ಮತ್ತು ಮಾನ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಕೃಷಿ ಇಲಾಖೆ ಇವರ ಸಹ-ಅಧ್ಯಕ್ಷತೆಯಲ್ಲಿ, ಸದರಿ ಯೋಜನೆಯನ್ನು ನಿಯತಕಾಲಿಕವಾಗಿ ಮೇಲ್ವಿಚಾರಣೆ ಮಾಡಲು ಮತ್ತು ಬೆಳೆ ಸಮೀಕ್ಷೆಯ ಮಾಹಿತಿಯ ಬಳಕೆ ಬಗ್ಗೆ ಸರ್ಕಾರಕ್ಕೆ ಶಿಫಾರಸ್ಸು ಮಾಡಲು **ರಾಜ್ಯ ಮಟ್ಟದ ಉಸ್ತುವಾರಿ ಸಮಿತಿ** ಹಾಗೂ ಕೃಷಿ ಆಯುಕ್ತರ ಅಧ್ಯಕ್ಷತೆಯಲ್ಲಿ ತೋಟಗಾರಿಕೆ, ರೇಷ್ಮೆ-ಇಲಾಖೆಗಳ ಮತ್ತು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಸದಸ್ಯರನ್ನೊಳಗೊಂಡಂತೆ **ರಾಜ್ಯ ಮಟ್ಟದ ಉಸ್ತುವಾರಿ ಸಮಿತಿಯ ಉಪಸಮಿತಿಯನ್ನು ಸಹ ಮುಂದುವರೆಸಲಾಗುವುದು** ಎಂದು ತಿಳಿಸಿರುತ್ತಾರೆ.

**ಹಾಗೂ ಬೆಳೆ ಸಮೀಕ್ಷೆ ಕಾರ್ಯಕ್ರಮದ ವಿವಿಧ ಇಲಾಖೆ/ಘಟಕಗಳ ಪಾತ್ರ ಮತ್ತು ಜವಾಬ್ದಾರಿಗಳನ್ನು** ಸಹ ಕಳೆದ ಸಾಲಿನಂತೆಯೇ ಮುಂದುವರೆಸುತ್ತಾ, **2021-22ನೇ ಸಾಲಿಗೆ ಬೆಳೆ ಸಮೀಕ್ಷೆ ಯೋಜನೆಯನ್ನು,** ವೇಳಾಪಟ್ಟಿಯೊಂದಿಗೆ ರೂ.49.00 ಕೋಟಿಗಳ ವೆಚ್ಚದಲ್ಲಿ **ಸಮರ್ಪಕವಾಗಿ ಅನುಷ್ಠಾನಗೊಳಿಸಲು** ಸರ್ಕಾರದ ಆದೇಶ ಹೊರಡಿಸುವಂತೆ ಕೃಷಿ ಆಯುಕ್ತರು ಕೋರಿರುತ್ತಾರೆ.

**2021-22ನೇ ಸಾಲಿನ ಆಯವ್ಯಯದಲ್ಲಿ ಹೊಸ ಬೆಳೆ ವಿಮೆ ಯೋಜನೆ ಲೆಕ್ಕ ಶೀರ್ಷಿಕೆ:**2401-00-110-0-07ರಡಿ ಒಟ್ಟು ರೂ.900.00 ಕೋಟಿ ಅನುದಾನವನ್ನು ಒದಗಿಸಲಾಗಿರುತ್ತದೆ.

ಮೇಲ್ಕಂಡ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

## ಸರ್ಕಾರದ ಆದೇಶ ಸಂಖ್ಯೆ: ಕೃಇ 73 ಕೃಕೈಲು 2021, ಬೆಂಗಳೂರು.

## ದಿನಾಂಕ:03.08.2021

ಪ್ರಸ್ತಾವನೆಯಲ್ಲಿ ವಿವರಿಸಲಾಗಿರುವ ಅಂಶಗಳ ಹಿನ್ನೆಲೆಯಲ್ಲಿ, **2021-22ನೇ ಸಾಲಿಗೆ ಬೆಳೆ ಸಮೀಕ್ಷೆ ಯೋಜನೆಯನ್ನು, ಅನುಬಂಧ ದಲ್ಲಿರುವ ವೇಳಾಪಟ್ಟಿಯಂತೆ** ರೂ.49.00 ಕೋಟಿಗಳ ವೆಚ್ಚದಲ್ಲಿ **ಸಮರ್ಪಕವಾಗಿ ಅನುಷ್ಠಾನಗೊಳಿಸಲು ಸರ್ಕಾರದ ಅನುಮೋದನೆ ನೀಡಿ ಆದೇಶಿಸಿದೆ.**

2021-22ನೇ ಸಾಲಿನಿಂದ ಬೆಳೆ ಸಮೀಕ್ಷೆ ಯೋಜನೆಯನ್ನು ಮುಂದುವರೆದ ಯೋಜನೆ (ಚಾಲ್ತಿ ಯೋಜನೆ) ಎಂದು ಪರಿಗಣಿಸಿ, ಸದರಿ ಯೋಜನೆಯನ್ನು ಪ್ರತಿ ವರ್ಷ ಕೃಷಿ ಇಲಾಖೆಯಿಂದ ಅನುಷ್ಠಾನಗೊಳಿಸಲು ಸರ್ಕಾರದ ಅನುಮತಿ ನೀಡಿದೆ.

2021ರ ಪೂರ್ವ ಮುಂಗಾರು, ಮುಂಗಾರು, ಹಿಂಗಾರು ಮತ್ತು ಬೇಸಿಗೆ ಹಂಗಾಮುಗಳ ಬೆಳೆ ಸಮೀಕ್ಷೆಯನ್ನು ಜಿಲ್ಲಾಧಿಕಾರಿಗಳ ಮೇಲ್ವಿಚಾರಣೆಯಲ್ಲಿ ಸಿಬ್ಬಂದಿ ಮತ್ತು ಆಡಳಿತ **ಸುಧಾರಣೆ** ಇಲಾಖೆ (ಇ-ಆಡಳಿತ) ರವರ ಮಾರ್ಪಡಿತ ಮೊಬೈಲ್ ಆ್ಯಪ್ ಬಳಸಿಕೊಂಡು (ಅ) ರೈತರೇ ಸ್ವತಂತ್ರವಾಗಿ

(ಆ) ಖಾಸಗಿ ನಿವಾಸಿಗಳ ಸಹಾಯದೊಂದಿಗೆ ರೈತರು, ಮತ್ತು (ಇ) ಒಂದು ವೇಳೆ (ಅ) ಮತ್ತು (ಆ) ಸಾಧ್ಯವಾಗದಿದ್ದಲ್ಲಿ, ಖಾಸಗಿ ನಿವಾಸಿಗಳು ಮತ್ತು ಸರ್ಕಾರದ ಸಿಬ್ಬಂದಿಗಳನ್ನು ಬಳಸಿಕೊಂಡು ಕೈಗೊಳ್ಳತಕ್ಕದ್ದು.

2021ರ ಬೆಳೆ ಸಮೀಕ್ಷೆ ಯೋಜನೆಗೆ ಅನುಬಂಧ-1 ರಂತೆ, ರೂ.49.00 ಕೋಟಿಗಳ ವೆಚ್ಚವನ್ನು, **2021-22ನೇ ಸಾಲಿನ ಆಯವ್ಯಯದಲ್ಲಿ ಹೊಸ ಬೆಳೆ ವಿಮೆ ಯೋಜನೆ ಲೆಕ್ಕ ಶೀರ್ಷಿಕೆ:**2401-00-110-0-07 ರಡಿ ಒದಗಿಸಲಾದ ರೂ.900.00 ಕೋಟಿಗಳ ಅನುದಾನದಲ್ಲಿ ಭರಿಸತಕ್ಕದ್ದು.

ಬೆಳೆ ಸಮೀಕ್ಷೆ ಪ್ರಾರಂಭವಾಗುವ ಮುನ್ನ ಗ್ರಾಮ ಪಂಚಾಯಿತಿ ಮಟ್ಟದಿಂದ ರಾಜ್ಯ ಮಟ್ಟದವರೆಗೆ ಎಲ್ಲಾ ಸ್ಥಳೀಯ ಜನಪ್ರತಿನಿಧಿಗಳು, ರೈತ ಮುಖಂಡರು, ಮಾಧ್ಯಮ ಪ್ರತಿನಿಧಿಗಳನ್ನು ಒಳಗೊಂಡಂತೆ, ಕೃಷಿಗೆ ಸಂಬಂಧಿಸಿದ ಎಲ್ಲಾ ಇಲಾಖೆಗಳ ಮುಖ್ಯಸ್ಥರು ಪ್ರಚಾರ ಕಾರ್ಯಕ್ರಮದಲ್ಲಿ ಕಡ್ಡಾಯವಾಗಿ ಭಾಗವಹಿಸತಕ್ಕದ್ದು.

ರಾಜ್ಯ ಮಟ್ಟದ ಬೆಳೆ ಸಮೀಕ್ಷೆ ತಂಡ (CSWG/PMU) ಹಾಗೂ ಬೆಳೆ ಸಮೀಕ್ಷೆ ಸಹಾಯವಾಣಿ (Help Desk) ಈ ಎರಡೂ ತಂಡಗಳು ಒಂದೇ ಕಚೇರಿಯಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಕೃಷಿ ಇಲಾಖೆ ಇವರ ಅಧೀನದಲ್ಲಿ ಕಾರ್ಯನಿರ್ವಹಿಸತಕ್ಕದ್ದು.

ಎಲ್ಲಾ ಕಚ್ಚಾ ಹಾಗೂ ಸಂಸ್ಕರಿತ ದತ್ತಾಂಶವನ್ನು ಕೃಷಿ, ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ ಮತ್ತು ಇ-ಆಡಳಿತ ಇಲಾಖೆಗಳಲ್ಲಿ ಏಕಕಾಲದಲ್ಲಿ ಲಭ್ಯವಾಗಿಸುವುದು(hosted). ದತ್ತಾಂಶ ಮಾಹಿತಿಗೆ Access to data ಕೃಷಿ ಹಾಗೂ ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಗೆ ನೀಡತಕ್ಕದ್ದು.

ಬೆಳೆ ಸಮೀಕ್ಷೆ ಕಾರ್ಯ ವಿಧಾನ ಹಾಗೂ ಖಾಸಗಿ ನಿವಾಸಿಗಳು, ಸರ್ಕಾರಿ ಸಿಬ್ಬಂದಿಗಳಿಗೆ ಪಾವತಿಸುವ ಗೌರವಧನದ ಬಗ್ಗೆ ವಿವರಗಳನ್ನು ಅನುಬಂಧ-2 ರಲ್ಲಿ ನೀಡಲಾಗಿದೆ.

ಬೆಳೆ ಸಮೀಕ್ಷೆ ಯೋಜನೆಗೆ ಸಂಬಂಧಿಸಿದಂತೆ, ವಿವಿಧ ಇಲಾಖೆಗಳು, ಸಂಸ್ಥೆಗಳು, ಸಮಿತಿಗಳು ಹಾಗೂ ಅಧಿಕಾರಿಗಳು **ಅನುಬಂಧ-3** ರಂತೆ ಜವಾಬ್ದಾರಿಗಳನ್ನು ನಿರ್ವಹಿಸತಕ್ಕದ್ದು.

ಬೆಳೆ ಸಮೀಕ್ಷೆ ಅನುಷ್ಠಾನಕ್ಕೆ ಸಂಬಂಧಿಸಿದಂತೆ, ಅನುಬಂಧ-4 ರಂತೆ, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ರಾಜ್ಯ ಮಟ್ಟದ ಉಸ್ತುವಾರಿ ಸಮಿತಿ, ಕೃಷಿ ಆಯುಕ್ತರ ಅಧ್ಯಕ್ಷತೆಯಲ್ಲಿ ರಾಜ್ಯ ಮಟ್ಟದ ಉಸ್ತುವಾರಿ ಸಮಿತಿಯ ಉಪ ಸಮಿತಿ, ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಸಮಿತಿ ಹಾಗೂ ತಹಶೀಲ್ದಾರ್‌ರವರ ಅಧ್ಯಕ್ಷತೆಯಲ್ಲಿ ತಾಲ್ಲೂಕು ಮಟ್ಟದ ಸಮಿತಿಗಳು ಮುಂದುವರೆಯುತ್ತವೆ.

ಬೆಳೆ ಸಮೀಕ್ಷೆ ದತ್ತಾಂಶವನ್ನು ಈ ಕೆಳಗಿನ ಚಟುವಟಿಕೆಗಳಿಗೆ ಬಳಸಲು ಅನುಮತಿ ನೀಡಿದೆ.

i. ಸಾಂಖ್ಯಿಕ ಇಲಾಖೆ, ಕೃಷಿ, ರೇಷ್ಮೆ ಮತ್ತು ತೋಟಗಾರಿಕೆಗಳ ಬೆಳೆ ವಿಸ್ತೀರ್ಣ ಎಣಿಕಾ ಕಾರ್ಯದಲ್ಲಿ.

ii. ಬೆಳೆ ಕಟಾವು ಪ್ರಯೋಗಗಳನ್ನು ಕೈಗೊಳ್ಳಲು ಹಾಗು ತಾಕಿನ/ಸರ್ವೆ ನಂಬರ್ ಆಯ್ಕೆ ಮಾಡಲು (ಎಲ್ಲೆಲ್ಲಿ ಸಾಧ್ಯವೋ ಅಲ್ಲಲ್ಲಿ ಎನ್‌ಎಸ್‌ಎಸ್ಒ ಮತ್ತು ಭಾರತ ಸರ್ಕಾರದ ಅನುಮೋದನೆಯೊಂದಿಗೆ)

iii. ಎನ್.ಡಿ.ಆರ್.ಎಫ್ / ಎಸ್.ಡಿ.ಆರ್.ಎಫ್ ಅಡಿಯಲ್ಲಿ ಸಹಾಯಧನ ನೀಡಲು

   ಅ) ಪ್ರಕೃತಿ ವಿಕೋಪದ ಸಂದರ್ಭದಲ್ಲಿ ಬೆಳೆ ಹಾನಿ ಕುರಿತು ವರದಿ ಸಿದ್ಧಪಡಿಸುವಲ್ಲಿ,

   ಆ) ಹಾನಿಗೊಳಗಾದ ಬೆಳೆ ವಿಸ್ತೀರ್ಣದ ವಿವರ ಸಿದ್ಧಪಡಿಸಲು,

   ಇ) ಅರ್ಹ ಫಲಾನುಭವಿಗಳ ಪಟ್ಟಿಯನ್ನು ತಯಾರಿಸುವ ಸಂದರ್ಭದಲ್ಲಿ,

iv. ಬೆಳೆ ವಿಮಾ ಯೋಜನೆ – ತಾಕು ಹಂತದ ಬೆಳೆ ಪರಿಶೀಲನೆ,

v. ಕನಿಷ್ಠ ಬೆಂಬಲ ಬೆಲೆ ನಿಗದಿ ಹಾಗೂ ಯೋಜನೆಯಡಿ ಅರ್ಹ ಫಲಾನುಭವಿಗಳನ್ನು ಗುರುತಿಸಲು.

vi. ಬೆಳೆ ಮಾನದಂಡಗಳಿಗೆ ಅನುಗುಣವಾಗಿ ಕೃಷಿ, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆಗಳ ಫಲಾನುಭವಿ ಆಧಾರಿತ ಯೋಜನೆಗಳ ಅನುಷ್ಠಾನಕ್ಕಾಗಿ

vii. ಆರ್.ಟಿ.ಸಿ.ಯಲ್ಲಿ ಬೆಳೆ ವಿವರ ದಾಖಲಾತಿಗಾಗಿ.

viii. ರೈತರಿಗೆ ರಾಷ್ಟ್ರೀಯ ಮತ್ತು ಗ್ರಾಮೀಣ ಬ್ಯಾಂಕ್‌ಗಳಲ್ಲಿ ಬೆಳೆ ಸಾಲ ಮಂಜೂರು ಮಾಡಲು.

ಈ ಆದೇಶವನ್ನು ಸಚಿವ ಸಂಪುಟವು ದಿನಾಂಕ:15.07.2021 ರಂದು ನೀಡಿರುವ ಅನುಮೋದನೆಯನ್ವಯ (ಪ್ರಕರಣ ಸಂಖ್ಯೆ: ಸಿ:247/2021) ಹಾಗೂ ಸರ್ಕಾರದ ಆದೇಶ ಸಂಖ್ಯೆ:ಎಫ್‌ಡಿ 01 ಟಿಎಫ್‌ಪಿ 2021, ದಿನಾಂಕ:05.04.2021ರಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಲಾಗಿರುವ ಆರ್ಥಿಕ ಅಧಿಕಾರದನ್ವಯ ಹೊರಡಿಸಲಾಗಿದೆ.

**ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ**
**ಮತ್ತು ಅವರ ಹೆಸರಿನಲ್ಲಿ**

(ಪಿ. ಸತ್ಯಭಾಮ) 3/8/2021

**ಸರ್ಕಾರದ ಅಧೀನ ಕಾರ್ಯದರ್ಶಿ**
**ಕೃಷಿ ಇಲಾಖೆ(ಯೋಜನೆ)**

3/8

ಇವರಿಗೆ:-

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್ ಎಸ್ ಎ), (ಇ & ಆರ್ ಎಸ್ ಎ), (ಎ & ಇ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು.
2. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು, ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಸಿ.ಆ.ಸು(ಇ-ಆಡಳಿತ) ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು

5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
6. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
7. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಯೋಜನಾ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
8. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಹಕಾರ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
9. ಸರ್ಕಾರದ ಪ್ರಧಾನ ಕಾರ್ಯದರ್ಶಿ, ತೋಟಗಾರಿಕೆ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
10. ಕೃಷಿ ಆಯುಕ್ತರು, ಶೇಷಾದ್ರಿ ರಸ್ತೆ, ಬೆಂಗಳೂರು.
11. ನಿರ್ದೇಶಕರು ತೋಟಗಾರಿಕೆ ಇಲಾಖೆ, ಲಾಲ್‌ಬಾಗ್, ಬೆಂಗಳೂರು.
12. ಕೃಷಿ ನಿರ್ದೇಶಕರು, ಶೇಷಾದ್ರಿ ರಸ್ತೆ, ಬೆಂಗಳೂರು.
13. ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು.
14. ನಿರ್ದೇಶಕರು (ಪಿಎಫ್‌ಡಿ), ಯೋಜನಾ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
15. ಎಲ್ಲಾ ಜಿಲ್ಲಾಧಿಕಾರಿಗಳು.
16. ಎಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್.
17. ಎಲ್ಲಾ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು.
18. ಸರ್ಕಾರದ ಉಪ ಕಾರ್ಯದರ್ಶಿ, ಸಚಿವ ಸಂಪುಟ ಶಾಖೆ, ವಿಧಾನಸೌಧ, ಬೆಂಗಳೂರು(ಸಿ:**247/2021)**
19. ಎಲ್ಲಾ ಜಿಲ್ಲಾ ಉಪ ತೋಟಗಾರಿಕಾ ನಿರ್ದೇಶಕರು.
20. ಎಲ್ಲಾ ಜಿಲ್ಲಾ ಉಪ ನಿರ್ದೇಶಕರು, ರೇಷ್ಮೆ ಇಲಾಖೆ.
21. ಎಲ್ಲಾ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು.
22. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ -4), ಬೆಂಗಳೂರು.
23. ಸರ್ಕಾರದ ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ, ಬೆಂಗಳೂರು.
24. ಆಂತರಿಕ ಆರ್ಥಿಕ ಸಲಹೆಗಾರರು, ಕೃಷಿ ಮತ್ತು ತೋಟಗಾರಿಕೆ ಇಲಾಖೆ, ಬೆಂಗಳೂರು.
25. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.

(ಕ್ರಮ ಸಂಖ್ಯೆ: 15 ರಿಂದ 17 ರವರೆಗೆ ಕೃಷಿ ನಿರ್ದೇಶಕರ ಮೂಲಕ
ಕ್ರಮ ಸಂಖ್ಯೆ: 19 ನಿರ್ದೇಶಕರು, ತೋಟಗಾರಿಕೆ ಇಲಾಖೆರವರ ಮೂಲಕ
ಕ್ರಮ ಸಂಖ್ಯೆ: 20 ಆಯುಕ್ತರು, ರೇಷ್ಮೆ ಇಲಾಖೆರವರ ಮೂಲಕ
ಕ್ರಮ ಸಂಖ್ಯೆ: 21 ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ರವರ ಮೂಲಕ)

**ಪ್ರತಿಯನ್ನು ಮಾಹಿತಿಗಾಗಿ:**

1. ಮಾನ್ಯ ಮುಖ್ಯಮಂತ್ರಿರವರ ಪ್ರಧಾನ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು
2. ಮಾನ್ಯ ಕೃಷಿ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಕೃಷಿ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ಬೆಂಗಳೂರು.

ಅನುಬಂಧ

ಅನುಷ್ಠಾನದ ವೇಳಾ ಪಟ್ಟಿ

## Subject: Implementation of Crop Survey Project during 2021-22

| Activity | Agency | Timelines | | | |
|---|---|---|---|---|---|
| | | Early Kharif | Kharif | Rabi | Summer |
| Release of mobile app and software to be used by farmers to upload the data | DPAR (e-gov) | All necessary Preliminary activities have been attended & completed | 15-08-2021 | 13-12-2021 | 01-03-2022 |
| Appointment of Private Residents and commencement of IEC. | Taluk Level Committee | | 01-08-2021 | 01-11-2021 | 01-02-2022 |
| Allocation of villages to Government officials. | Taluk Level Committee | | 10-08-2021 | 10-11-2021 | 10-02-2022 |
| Training to Master Trainers. | Agriculture Department | | 12-08-2021 | 12-11-2021 | 12-02-2022 |
| Training to Private residents through SATCOM. | Agriculture Department | | 13-08-2021 | 13-11-2021 | 13-02-2022 |
| 2nd Training to Private residents through Master Trainers. | District Administration | | 14-08-2021 | 14-12-2021 | 14-03-2022 |
| Start of Crop Survey Activity by farmers. | District Administration and Farmers | | 15-08-2021 | 15-12-2021 | 01-03-2022 |
| Cut-off date for farmers to upload crop details. | Farmers | 15-07-2021 | 01-09-2021 | 01-01-2022 | 31-03-2022 |
| Commencement and completion of Crop Survey by PRs. | Taluk Level Committees | 15-07-2021 and 31-07-2021 | 01-09-2021 and 30-09-2021 | 01-01-2022 and 15-01-2022 | 01-04-2022 and 15-04-2022 |
| Complete verification and certification of crop survey data by government officials. | Government Officials | 15-08-2021 | 15-10-2021 | 31-01-2022 | 01-05-2022 |
| Reconciliation of Crop Survey Data | District & Taluk Level Reconciliation Committees and DES | - | 15-11-2021 | 15-02-2022 | 15-05-2022 |

(ಪಿ. ಸತ್ಯಭಾಮ)
ಸರ್ಕಾರದ ಅಧೀನ ಕಾರ್ಯದರ್ಶಿ
ಕೃಷಿ ಇಲಾಖೆ(ಯೋಜನೆ)

# ಅನುಬಂಧ-1

2021-22ನೇ ಸಾಲಿನಲ್ಲಿ ಬೆಳೆ ಸಮೀಕ್ಷೆ ಯೋಜನೆಗೆ ಉಪ ಶೀರ್ಷಿಕೆವಾರು ವಿವಿಧ ಘಟಕಗಳಿಗೆ ಬಿಡುಗಡೆ ಮಾಡಲು ಅನುಮತಿ ನೀಡಿರುವ ಅನುದಾನದ ವಿವರ:

(ರೂ. ಕೋಟಿಗಳಲ್ಲಿ)

| ಕ್ರ. ಸಂ. | ಉಪ ಶೀರ್ಷಿಕೆ | ಘಟಕಗಳು | 2021-22ನೇ ಸಾಲಿಗೆ ಅನುದಾನ ಬಿಡುಗಡೆ |
|---|---|---|---|
| 1 | 015 | ಬೆಳೆ ಸಮೀಕ್ಷೆ ಕಾರ್ಯಕ್ಕಾಗಿ ಜಿಲ್ಲಾಡಳಿತವು ಬಳಸಿಕೊಳ್ಳುವ 227*4 ಮಾಸ್ಟರ್ ತರಬೇತುದಾರರ ಸೇವೆಗೆ ಪ್ರತಿ ಮಾಸ್ಟರ್ ತರಬೇತುದಾರರಿಗೆ ಪ್ರತಿ ವರ್ಷಕ್ಕೆ ರೂ.2000/- ಗಳಂತೆ ಹಾಗೂ 30*6 ಸಲಹೆಗಾರರಿಗೆ, ಪ್ರತಿ ಸಲಹೆಗಾರರಿಗೆ ಪ್ರತಿ ವರ್ಷಕ್ಕೆ ರೂ.3000/- ಗಳಂತೆ ಗೌರವಧನ | 00.23 |
| 2 | 051 | ಮುದ್ರಣ ಮತ್ತು ಮಾಧ್ಯಮಗಳ ಮೂಲಕ ಪ್ರಚಾರ, ಶೇ.1 ರಷ್ಟು ದತ್ತಾಂಶದ ಪರಿಶೀಲನೆ, ಹೆಲ್ಪ್ ಡೆಸ್ಕ್ ಮತ್ತು ಬೆಳೆ ಸಮೀಕ್ಷೆ ಕಾರ್ಯ ತಂಡದ ರಚನೆ ಮತ್ತು ನಿರ್ವಹಣೆ, ತಂತ್ರಾಂಶ ನಿರ್ವಹಣೆ, ತರಬೇತಿ ಮತ್ತು ಇತರೆ ಆಡಳಿತಾತ್ಮಕ ವೆಚ್ಚಗಳು | 9.00 |
| 3 | 324 | ಬೆಳೆ ಸಮೀಕ್ಷಕರಿಗೆ (ಖಾಸಗಿ ನಿವಾಸಿಗಳು ಮತ್ತು ಇಲಾಖಾ ಸಿಬ್ಬಂದಿಗಳು) ನೀಡುವ ಗೌರವಧನ | 39.77 |
| | | **ಒಟ್ಟು** | **49.00** |

P. Satya

(ಪಿ. ಸತ್ಯಭಾಮ)

**ಸರ್ಕಾರದ ಅಧೀನ ಕಾರ್ಯದರ್ಶಿ**

**ಕೃಷಿ ಇಲಾಖೆ(ಯೋಜನೆ)**

3/8

## ಅನುಬಂಧ-2

ಬೆಳೆ ಸಮೀಕ್ಷೆ ಕಾರ್ಯ ವಿಧಾನ ಹಾಗೂ ಖಾಸಗಿ ನಿವಾಸಿಗಳು, ಸರ್ಕಾರಿ ಸಿಬ್ಬಂದಿಗಳಿಗೆ ಪಾವತಿಸುವ ಗೌರವಧನದ ಬಗ್ಗೆ

ಎ. ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ(ಇ-ಆಡಳಿತ) ಇಲಾಖೆಯ ಪ್ರಸ್ತುತ ಚಾಲ್ತಿಯಲ್ಲಿರುವ ಮೊಬೈಲ್ ಆ್ಯಪ್/ ಆ್ಯಪ್ ಗಳಲ್ಲಿ ಮತ್ತು / ಅಥವಾ ಹೊಸದಾಗಿ ಅಭಿವೃದ್ಧಿಪಡಿಸುವ ಮೊಬೈಲ್ ಆ್ಯಪ್/ ಆ್ಯಪ್ ಗಳನ್ನು ಬಳಸಿಕೊಂಡು ಬೆಳೆ ಹಂಗಾಮುಗಳನ್ವಯ ನಿಗದಿತ ಸಮಯದೊಳಗೆ ರೈತರು ತಮ್ಮ ಕ್ಷೇತ್ರದ ಬೆಳೆ ದತ್ತಾಂಶವನ್ನು ಅಪ್ಲೋಡ್ ಮಾಡುವುದು. ಸದರಿ ಕಾರ್ಯದ ಕಡೆಯ (ಕಟ್-ಆಫ್) ದಿನಾಂಕಕ್ಕೆ ಮಾನ್ಯ ಕೃಷಿ ಸಚಿವರ ಅನುಮೋದನೆ ಪಡೆದು 15 ದಿನ ಅಥವಾ ಹೆಚ್ಚಿನ ದಿನಗಳ ಅವಧಿಯನ್ನು ರೈತರ ಭಾಗವಹಿಸುವಿಕೆಯನ್ವಯ ವಿಸ್ತರಣೆ ಮಾಡಬಹುದಾಗಿದೆ. ಆದಾಗ್ಯೂ, ಕೆಲವು ರೈತರು ಕಡೆಯ ದಿನಾಂಕದೊಳಗಾಗಿ ಬೆಳೆ ವಿವರವನ್ನು ಅಪ್ಲೋಡ್ ಮಾಡದೇ ಇದ್ದ ಪಕ್ಷದಲ್ಲಿ ಸರ್ಕಾರವು ಖಾಸಗಿ ನಿವಾಸಿಗಳ (ಪಿಆರ್) ಅಥವಾ ಸರ್ಕಾರಿ ಅಧಿಕಾರಿ/ಸಿಬ್ಬಂದಿಗಳ ಸೇವೆಯನ್ನು ಉಪಯೋಗಿಸಿಕೊಂಡು ಬೆಳೆ ಸಮೀಕ್ಷೆ ಕಾರ್ಯವನ್ನು ಕೈಗೊಳ್ಳುವುದು.

ಬಿ. ರೈತರೇ ತಮ್ಮ ಜಮೀನಿನ ಮಾಹಿತಿಯನ್ನು ಅಪ್ಲೋಡ್ ಮಾಡಲು ರೈತ/ ರೈತ ಮಹಿಳೆ ಮೊದಲು ತಮ್ಮ ಆಧಾರ್ ಸಂಖ್ಯೆ ಮತ್ತು ಅಪ್ಲೋಡ್ ಮಾಡುವ ಮೊಬೈಲ್ ಸಂಖ್ಯೆಯನ್ನು ನಮೂದಿಸುವುದು. ಎರಡು ಬಾರಿ ಒಂದು ಸರ್ವೆ ನಂಬರ್ /ಹಿಸ್ಸಾದಲ್ಲಿ ಬೆಳೆಯ ಫೋಟೋ ಮತ್ತು ದತ್ತಾಂಶವು ಅಪ್ಲೋಡ್ ಆದನಂತರ ಸದರಿ ಸರ್ವೆ /ಹಿಸ್ಸಾ ನಂಬರ್ ಸ್ವಯಂ ಲಾಕ್ ಆಗುತ್ತದೆ ಹಾಗೂ ಆ ವ್ಯಾಪ್ತಿಯ ಪರಿಶೀಲಕರು(Verifier) ಅನ್ ಲಾಕ್ ಮಾಡಿದಾಗ ಮಾತ್ರ ಕೇವಲ ಆ ಗ್ರಾಮಕ್ಕೆ ನಿಯೋಜನೆಗೊಂಡ ಖಾಸಗಿ ನಿವಾಸಿಗೆ /ಸರ್ಕಾರಿ ಸಿಬ್ಬಂದಿಗೆ ಹೊರತು ಪಡಿಸಿ ಯಾವುದೇ ಕಾರಣಕ್ಕೂ ಇತರೆ ಯಾವುದೇ ಮೊಬೈಲ್ ನಲ್ಲಿ ಮರು ಅಪ್ಲೋಡ್ ಮಾಡಲು ಅವಕಾಶವಿರುವುದಿಲ್ಲ. ಪರಿಶೀಲಕರು ಅಪ್ಲೋಡ್ ಮಾಡಿದ ದತ್ತಾಂಶವು ಸ್ವೀಕರಿಸಲು ಯೋಗ್ಯವಾದುದೆಂದು ಕಂಡು ಬಂದರೆ ಸ್ವೀಕರಿಸುತ್ತಾರೆ. ಬೆಳೆ ಛಾಯಾಚಿತ್ರವು ಬೆಳೆಯ ಹೆಸರಿನೊಂದಿಗೆ ಹೊಂದಾಣಿಕೆಯಾಗದಿದ್ದಲ್ಲಿ, ಪರಿಶೀಲಕರು ಬೆಳೆಯ ವಿವರಗಳನ್ನು ಪರಿಶೀಲಿಸಿ ಸಾಧ್ಯವಾದಲ್ಲಿ ಸರಿಪಡಿಸುವುದು ಮತ್ತು ಮೌಲ್ಯೀಕರಿಸುವುದು. ಅಪ್ಲೋಡ್ ಮಾಡಿದ ದತ್ತಾಂಶವು ಸರಿ ಇಲ್ಲದಿದ್ದಲ್ಲಿ ಹಾಗೂ ಅಪೂರ್ಣವಿದ್ದಲ್ಲಿ ಮರುಸಮೀಕ್ಷೆಗೆ ಗುರುತಿಸುವುದು.

ಗ್ರಾಮನಕ್ಷೆ ಲಭ್ಯ ಇಲ್ಲದೇ ಇದ್ದ ಪಕ್ಷದಲ್ಲಿ ಅಥವಾ ಡಿಜಿಟೈಸ್ ಆಗದೇ ಇರುವ ಅಥವಾ geo reference ನಕ್ಷೆ ಇಲ್ಲದೇ ಇದ್ದ ಪಕ್ಷದಲ್ಲಿ ಅಂತಹ ಗ್ರಾಮಗಳ ಸಮೀಕ್ಷೆಯನ್ನು ಸರ್ಕಾರಿ ಸಿಬ್ಬಂದಿಗಳ ಸಹಾಯದೊಂದಿಗೆ ಖಾಸಗಿ ನಿವಾಸಿಗಳು ಅಥವಾ ಸರ್ಕಾರಿ ಸಿಬ್ಬಂದಿಗಳೇ ಕೈಗೊಳ್ಳುತ್ತಾರೆ. ವಿವಿಧ ಕಾರಣಗಳಿಂದ ಖಾಸಗಿ ನಿವಾಸಿಗಳು ಸಹ ಸಮೀಕ್ಷೆ ಕೈಗೊಳ್ಳಲು ಸಾಧ್ಯವಾಗದೇ ಇದ್ದ ಪಕ್ಷದಲ್ಲಿ ಅಂತಹ ತಾಕುಗಳ ಬೆಳೆ ಮಾಹಿತಿಯನ್ನು ಸರ್ಕಾರಿ ಸಿಬ್ಬಂದಿಗಳು ರೈತರೊಂದಿಗೆ ಸಮಾಲೋಚಿಸಿ ಅಥವಾ ದೃಷ್ಟಿಗೋಚರದನ್ವಯ ಮ್ಯಾನ್ಯುಯಲ್(manual) ಆಗಿ ದಾಖಲಿಸುವುದು.

ಬೆಳೆ ಸಮೀಕ್ಷೆಯ ಮಾಹಿತಿಯು ಖಾಸಗಿ ನಿವಾಸಿ ಮತ್ತು ಸರ್ಕಾರಿ ಸಿಬ್ಬಂದಿಗಳಿಂದ ದಾಖಲಿಸಿದಲ್ಲಿ ಪರಿಶೀಲನೆ, ಆಕ್ಷೇಪಣೆ ಸಲ್ಲಿಕೆ ಹಾಗೂ ವಿಶ್ಲೇಷಣೆ ಕಾರ್ಯಗಳು ಹಿಂದಿನ ಸಾಲಿನಂತೆಯೇ ಮುಂದುವರೆಸುವುದು.

ಸಿ. ಖಾಸಗಿ ನಿವಾಸಿಗಳು ಕೊನೆಯ ದಿನಾಂಕದ ವರೆಗೆ ರೈತನು ಅಪ್‌ಲೋಡ್ ಮಾಡಿದ ಬೆಳೆ ವಿವರಗಳಿಗೆ ಅನುಗುಣವಾಗಿ ಪ್ರತಿ ಪ್ರಕರಣಕ್ಕೆ ಖಾಸಗಿ ನಿವಾಸಿಗಳಿಗೆ ರೂ.10/- ಗಳನ್ನು ಮತ್ತು ಸರ್ವೆ ನಂಬರ್ ನಲ್ಲಿ ಇರುವ ಪ್ರತಿ ಹೆಚ್ಚುವರಿ ಬೆಳೆಯ ವಿವರಗಳಿಗೆ ರೂ.5/- ರಂತೆ ಗರಿಷ್ಠ ರೂ.20/- ಪಾವತಿಸುವುದು. ಕೊನೆಯ ದಿನಾಂಕದ ನಂತರ ಖಾಸಗಿ ನಿವಾಸಿಗಳು ಸ್ವತಃ ಸಮೀಕ್ಷೆ ಮಾಡಿ ಅಪ್‌ಲೋಡ್ ಮಾಡಿದ ವಿವರಗಳಿಗೆ ಸಂಬಂಧಿಸಿದಂತೆ, ಮೊದಲ ಬೆಳೆಗಳಿಗೆ ರೂ.10/- ಗಳನ್ನು ಮತ್ತು ಸರ್ವೆ ನಂಬರ್ ನಲ್ಲಿ ಇರುವ ಪ್ರತಿ ಹೆಚ್ಚುವರಿ ಬೆಳೆಯ ವಿವರಗಳಿಗೆ ರೂ.5/- ರಂತೆ ಗರಿಷ್ಠ ರೂ.20/- ಪಾವತಿಸುವುದು.

ಸರ್ಕಾರಿ ಸಿಬ್ಬಂದಿಗಳು ಬೆಳೆ ಸಮೀಕ್ಷೆ ಕಾರ್ಯವನ್ನು ಕೈಗೊಂಡು, ಒಂದು ದಿನದಲ್ಲಿ 50ಕ್ಕೂ ಹೆಚ್ಚಿನ ತಾಕುಗಳನ್ನು ಬೆಳೆ ಸಮೀಕ್ಷೆ ಮಾಡಿದಲ್ಲಿ, 50ಕ್ಕೂ ಹೆಚ್ಚಿನ ತಾಕುಗಳಿಗೆ ಮಾತ್ರ ಮೇಲಿನ ಕಂಡಿಕೆಯಂತೆ ಗೌರವಧನವನ್ನು (ಐಇಸಿ ಭಾಗವನ್ನು ಹೊರತುಪಡಿಸಿ) ನೀಡುವುದು.

ಖಾಸಗಿ ನಿವಾಸಿಗಳಿಗೆ ಮಾಡಲಾಗುವ ಎಲ್ಲಾ ಪಾವತಿಗಳನ್ನು ಆಧಾರ್ ಆಧಾರಿತ ಬ್ಯಾಂಕ್ ಖಾತೆಗೆ ಜಮೆ ಮಾಡಲಾಗುವುದು. ಆಧಾರ್ ಜೋಡಣೆಯಾಗಿಯೂ ಎರಡಕ್ಕಿಂತ ಹೆಚ್ಚಿನ ಬಾರಿ ಗೌರವಧನ ಪಾವತಿ ವಿಫಲವಾದ ಪಕ್ಷದಲ್ಲಿ NEFT ಮೂಲಕ ಖಾಸಗಿ ನಿವಾಸಿಗಳ ಬ್ಯಾಂಕ್ ಖಾತೆಗೆ ಗೌರವಧನ ಪಾವತಿ ಮಾಡುವುದು.

ಡಿ. ಖಾಸಗಿ ನಿವಾಸಿಗಳು ಮತ್ತು ಸರ್ಕಾರಿ ಸಿಬ್ಬಂದಿ (ಇನ್ನು ಮುಂದೆ ಸರ್ವೇಯರ್ ಎಂದು ಕರೆಯಲಾಗುವುದು) ಸಂಗ್ರಹಿಸಿದ ಮಾಹಿತಿ/ ದತ್ತಾಂಶವನ್ನು ಪರಿಶೀಲಿಸಲಾಗುವುದು. ಇದಕ್ಕೆ ಸೂಕ್ತ ಮಾರ್ಪಾಡುಗಳನ್ನು ಕೃಷಿ ಇಲಾಖೆಯ ಉಸ್ತುವಾರಿ ಕಾರ್ಯದರ್ಶಿಗಳು ಮಾಡಬಹುದು.

ಇ. ಬೆಳೆ ಸಮೀಕ್ಷೆಯ ಒಟ್ಟಾರೆ ಜವಾಬ್ದಾರಿ ಕೃಷಿ ಇಲಾಖೆಯದಾಗಿದ್ದು, ಜಿಲ್ಲಾಧಿಕಾರಿಗಳ ಒಟ್ಟಾರೆ ಮೇಲ್ವಿಚಾರಣೆಯಲ್ಲಿ ಕಂದಾಯ, ತೋಟಗಾರಿಕೆ, ರೇಷ್ಮೆ ಮತ್ತು ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ ಮತ್ತು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ(ಇ-ಆಡಳಿತ)ಗಳ ಸಹಯೋಗದೊಂದಿಗೆ ಅನುಷ್ಠಾನ ಮಾಡುವುದು. ಖಾಸಗಿ ನಿವಾಸಿಗಳು ಮತ್ತು ಯೋಜನೆಯ ದೈನಂದಿನ ಮೇಲ್ವಿಚಾರಣೆಯನ್ನು ಅಪರ ಜಿಲ್ಲಾಧಿಕಾರಿಗಳು, ಜಂಟಿ ಕೃಷಿ ನಿರ್ದೇಶಕರು, ತೋಟಗಾರಿಕೆ, ರೇಷ್ಮೆ ಮತ್ತು ಸಾಂಖ್ಯಿಕ ಇಲಾಖೆಗಳ ಜಿಲ್ಲಾಮಟ್ಟದ ಅಧಿಕಾರಿಗಳು ಮಾಡುವುದು.

**ಎಫ್**. ಬೆಳೆ ಸಮೀಕ್ಷೆಯನ್ನು ಕೈಗೊಳ್ಳುವ ಸೂಚಕ(indicative) ವಿಧಾನ ಈ ಕೆಳಗಿನಂತಿದೆ:

I. ಜಿಲ್ಲಾಮಟ್ಟದ ಸಮಿತಿಯು ಜಿಲ್ಲಾಧಿಕಾರಿಗಳು (ಅಧ್ಯಕ್ಷರು), ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ (ಸಹ-ಅಧ್ಯಕ್ಷರು), ಅಪರ ಜಿಲ್ಲಾಧಿಕಾರಿಗಳು (ನೋಡಲ್ ಅಧಿಕಾರಿ) ಮತ್ತು ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು (ಸದಸ್ಯ ಕಾರ್ಯದರ್ಶಿ), ಜಿಲ್ಲಾ ಮಟ್ಟದ ತೋಟಗಾರಿಕೆ, ರೇಷ್ಮೆ ಮತ್ತು ಸಾಂಖ್ಯಿಕ ಇಲಾಖೆ ಅಧಿಕಾರಿಗಳನ್ನು ಒಳಗೊಂಡಿದ್ದು, ಬೆಳೆ ಮಾಹಿತಿ (ಡೇಟಾ) ಸಂಗ್ರಹಣೆ ಜವಾಬ್ದಾರಿಯನ್ನು ಹೊಂದಿರುತ್ತದೆ.

II. ತಹಶೀಲ್ದಾರ್ (ಅಧ್ಯಕ್ಷರು), ಸಹಾಯಕ ಕೃಷಿ ನಿರ್ದೇಶಕರು (ಸದಸ್ಯ ಕಾರ್ಯದರ್ಶಿ) ಮತ್ತು ತೋಟಗಾರಿಕೆ, ರೇಷ್ಮೆ ಮತ್ತು ಸಾಂಖ್ಯಿಕ ಇಲಾಖೆಗಳ ತಾಲ್ಲೂಕು ಮಟ್ಟದ ಅಧಿಕಾರಿಗಳನ್ನು ಒಳಗೊಂಡ ತಾಲ್ಲೂಕು ಮಟ್ಟದ ಸಮಿತಿಯು ಖಾಸಗಿ ನಿವಾಸಿಗಳ ಆಯ್ಕೆ, ಸರ್ಕಾರಿ ಸಿಬ್ಬಂದಿಗಳಿಗೆ ಗ್ರಾಮಗಳನ್ನು ಹಂಚಿಕೆ ಮಾಡುವುದು ಮತ್ತು ಕ್ಷೇತ್ರ ಅಧಿಕಾರಿಗಳಿಗೆ ಗ್ರಾಮಗಳನ್ನು ನಿಯೋಜಿಸುವುದು. ಖಾಸಗಿ ನಿವಾಸಿಗಳನ್ನು ತ್ವರಿತವಾಗಿ ಆಯ್ಕೆಮಾಡಲು ಮತ್ತು ಅವರಿಗೆ ಗ್ರಾಮಗಳ ಹಂಚಿಕೆಗಾಗಿ,

ಸಮಿತಿಯು ತನ್ನ ಅಧಿಕಾರವನ್ನು ಸದಸ್ಯ ಕಾರ್ಯದರ್ಶಿ ಮತ್ತು ಇತರೆ ಸದಸ್ಯರಿಗೆ ವಹಿಸಬಹುದು. ತಾಲ್ಲೂಕು ಮಟ್ಟದ ಸಮಿತಿಯು ರೈತರಿಂದ, ಖಾಸಗಿ ನಿವಾಸಿಗಳ ಜೊತೆಗೆ ರೈತರಿಂದ, ಇವರಿಬ್ಬರ ಅನುಪಸ್ಥಿತಿಯಲ್ಲಿ ಖಾಸಗಿ ನಿವಾಸಿ/ಬೆಳೆ ಸರ್ವೇಯರ್‌ಗಳಿಂದ ಆಯಾ ಹಳ್ಳಿಗಳಲ್ಲಿ ಮಾಹಿತಿ ಸಂಗ್ರಹಿಸುವ ಜವಾಬ್ದಾರಿಯನ್ನು ಹೊಂದಿರುತ್ತದೆ.

ತಾಲ್ಲೂಕು ಮಟ್ಟದ ಸಮಿತಿಯು–

i. ಅಗತ್ಯವಿದ್ದಲ್ಲಿ ಖಾಸಗಿ ಸಂಪನ್ಮೂಲಗಳ ಜೊತೆಗೆ ಮಾಹಿತಿ/ ದತ್ತಾಂಶ ಸಂಗ್ರಹಣೆಗಾಗಿ ಗ್ರಾಮ ಸಹಾಯಕರು ಮತ್ತು ಸ್ಥಳೀಯ ಯುವಕರು ಸೇವೆಗಳನ್ನು ಪಡೆದುಕೊಳ್ಳಬಹುದು. ಇವರನ್ನು ಸಹ ಖಾಸಗಿ ನಿವಾಸಿಗಳೆಂದು ಪರಿಗಣನೆ ಮಾಡಲಾಗುತ್ತದೆ.
ii. ಬೆಳೆ ಸಮೀಕ್ಷೆಗಾರ(ಸರ್ವೇಯರ್) ಆಗಿ ಸರ್ಕಾರಿ ಸಿಬ್ಬಂದಿಯನ್ನು ನೇಮಿಸಿಕೊಳ್ಳಬಹುದು.

III. ಖಾಸಗಿ ನಿವಾಸಿ (ಪಿಆರ್)ಗಳನ್ನು ತಾಲ್ಲೂಕು ಮಟ್ಟದ ಸಮಿತಿ ಆಯ್ಕೆ ಮಾಡುತ್ತದೆ. ಖಾಸಗಿ ನಿವಾಸಿಗಳು ಸಾಧ್ಯವಾದಷ್ಟು ಬೇಗ ಸಮೀಕ್ಷೆಯ ಹೊಸ ಅಂಶಗಳ ಬಗ್ಗೆ ರೈತರಲ್ಲಿ ಅರಿವು ಮೂಡಿಸುವುದರ ಜೊತೆಗೆ ಅವರಿಗೆ ತಾಂತ್ರಿಕ ಮಾರ್ಗದರ್ಶನ ನೀಡಿ ಮತ್ತು ಅವರ ಬೆಳೆ ವಿವರಗಳನ್ನು ಛಾಯಾಚಿತ್ರದೊಂದಿಗೆ ಅಪ್‌ಲೋಡ್ ಮಾಡಲು ಪ್ರೋತ್ಸಾಹಿಸುವುದು. ಕೊನೆಯ ದಿನಾಂಕದ ನಂತರ, ಖಾಸಗಿ ನಿವಾಸಿಗಳು ಬಿಟ್ಟುಹೋದ ಕ್ಷೇತ್ರಗಳನ್ನು (ಸರ್ವೆ ನಂಬರ್ ಮತ್ತು ಅದರ ಹಿಸ್ಸಾಗಳು) ಮತ್ತು ರೈತರು ಅಪ್‌ಲೋಡ್ ಮಾಡಿದ ಮಾಹಿತಿಯನ್ನು ಮರು ಮೌಲ್ಯಮಾಪನ ಮಾಡುವ ಅಥವಾ ಮರು ಸಮೀಕ್ಷೆಗಾಗಿ ಗುರುತಿಸಲಾಗಿರುವ ಕ್ಷೇತ್ರಗಳಿಗೆ ರೈತರು/ಹಕ್ಕುದಾರರೊಂದಿಗೆ ಭೇಟಿ ನೀಡಿ, ಬೆಳೆಗಳ ಫೋಟೋ ತೆಗೆದು ಅದರ ಮಾಹಿತಿಯನ್ನು ಅಪ್ಲೋಡ್ ಮಾಡುವುದು.

IV. ನಿಗದಿಪಡಿಸಿದ ಗ್ರಾಮ / ಗ್ರಾಮಗಳು ಹಾಗೂ ಖಾಸಗಿ ನಿವಾಸಿಗಳು ತಾಲ್ಲೂಕು ಮಟ್ಟದ ಸಮಿತಿಯಿಂದ ನೇಮಿಸಲ್ಪಟ್ಟ ಸರ್ಕಾರಿ ಅಧಿಕಾರಿಗಳ ಮೇಲ್ವಿಚಾರಣೆಯಲ್ಲಿರತಕ್ಕದ್ದು.

V. ತಾಲ್ಲೂಕು ಮಟ್ಟದ ಸಮಿತಿಗಳ ಮೂಲಕ ನಿಗದಿತ ಸಮಯದೊಳಗೆ ಖಾಸಗಿ ನಿವಾಸಿಗಳು ಬೆಳೆ ದತ್ತಾಂಶ ಸಂಗ್ರಹಿಸುವ ಪ್ರಕ್ರಿಯೆಯನ್ನು ಮತ್ತು ಸುಗಮಗೊಳಿಸುವ ಜವಾಬ್ದಾರಿಯನ್ನು ಜಿಲ್ಲಾ ಮಟ್ಟದ ಸಮಿತಿಯು ವಹಿಸುವುದು.

VI. ಸಮೀಕ್ಷೆಯಡಿ ಉದ್ಭವಿಸುವ ತಾಂತ್ರಿಕ ಸಮಸ್ಯೆಗಳನ್ನು ಬಗೆಹರಿಸಲು ಹಾಗೂ ಖಾಸಗಿ ನಿವಾಸಿಗಳಿಗೆ ತರಬೇತಿ ನೀಡಲು ಪ್ರತಿ ತಾಲ್ಲೂಕಿನಲ್ಲಿ ಕೃಷಿ, ತೋಟಗಾರಿಕೆ ಮತ್ತು ಕಂದಾಯ ಇಲಾಖೆಗಳಿಂದ ನಾಲ್ಕು ಜನ ಮಾಸ್ಟರ್ ತರಬೇತುದಾರರನ್ನು ನೇಮಿಸುವುದು ಮತ್ತು ಕೃಷಿ ಇಲಾಖೆಯು ಈ ಮಾಸ್ಟರ್ ತರಬೇತುದಾರರಿಗೆ ಮತ್ತು ಜಿಲ್ಲಾಮಟ್ಟದ ಸಮಿತಿಯು ಖಾಸಗಿ ನಿವಾಸಿಗಳಿಗೆ ತರಬೇತಿಯನ್ನು ನೀಡುವುದು. ಈ ಕಾರ್ಯದಲ್ಲಿ ಜಿಲ್ಲಾಧಿಕಾರಿಗಳು ಲಭ್ಯವಿರುವ ವಿವಿದ ಶಾಖೆಯ ತಾಂತ್ರಿಕ ಸಲಹೆಗಾರರನ್ನು ಬಳಸಿಕೊಳ್ಳುವುದು (ಗರಿಷ್ಠ 6 ಜನ).

VII. ಗುರುತಿಸಲ್ಪಟ್ಟ ಎಲ್ಲಾ ಖಾಸಗಿ ನಿವಾಸಿಗಳಿಗೆ ಕೃಷಿ ಇಲಾಖೆಯ ವತಿಯಿಂದ ಸ್ಯಾಟ್‌ಕಾಮ್ (ಸ್ಯಾಟಲೈಟ್ ಕಮ್ಯುನಿಕೇಷನ್) ಮೂಲಕ ಒಂದು ಬಾರಿ ತರಬೇತಿಯನ್ನು ನೀಡಲಾಗುತ್ತದೆ.

VIII. ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯವು ಜಿಲ್ಲಾ / ತಾಲೂಕು ಮಟ್ಟದಲ್ಲಿ ಲಭ್ಯವಿರುವ ಜಿಲ್ಲಾ ಸಾಂಖ್ಯಿಕ ಅಧಿಕಾರಿ/ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ಪ್ರತಿನಿಧಿ ಮೂಲಕ ಶೇ.1 ರಷ್ಟು ಮೂರನೇ/ಬಾಹ್ಯ ವ್ಯಕ್ತಿಯ ದತ್ತಾಂಶ ಪರಿಶೀಲನೆಯನ್ನು ನಡೆಸುವುದು.

IX. ತಾಲ್ಲೂಕು ಮಟ್ಟದ ಸಮಿತಿಯು ಬೆಳೆ ಸಮೀಕ್ಷೆ ಮಾಹಿತಿ/ದತ್ತಾಂಶವನ್ನು ಏಕಕಾಲದಲ್ಲಿ ಮೇಲ್ವಿಚಾರಣೆ ಮಾಡಲು ಕೃಷಿ, ರೇಷ್ಮೆ ಮತ್ತು ತೋಟಗಾರಿಕೆ ಇಲಾಖೆಯ ಒಬ್ಬ ತಾಲ್ಲೂಕು ಮಟ್ಟದ ಅಧಿಕಾರಿಯನ್ನು ಗುಣಮಟ್ಟ ಖಾತರಿ ಅಧಿಕಾರಿ (ಕ್ಯುಎಒ) ಯಾಗಿ ನೇಮಿಸಬಹುದು. ಕ್ಷೇತ್ರದಿಂದ ಬರುವ ಮಾಹಿತಿಯ/ದತ್ತಾಂಶದ ಗುಣಮಟ್ಟವನ್ನು ನಿಯತಕಾಲಿಕವಾಗಿ ಪರಿಶೀಲಿಸುವುದು ಮತ್ತು ಅಗತ್ಯವಿರುವ ಕಡೆ ಪುನರ್ ಪರಿಶೀಲನೆಗೆ ಕಳುಹಿಸುವುದು. ತಾಲ್ಲೂಕು ಮಟ್ಟದ ಗುಣಮಟ್ಟ ಖಾತರಿ ಅಧಿಕಾರಿಯ ಜವಾಬ್ದಾರಿಯಾಗಿರುತ್ತದೆ. ಗುಣಮಟ್ಟ ಖಾತರಿ ಅಧಿಕಾರಿ ಉತ್ತಮ ಗುಣಮಟ್ಟದ ಮಾಹಿತಿ/ದತ್ತಾಂಶವನ್ನು ಪಡೆಯುವ ಜವಾಬ್ದಾರಿಯನ್ನು ಹೊಂದಿರುವುದರ ಜೊತೆಗೆ ಮಾಹಿತಿ/ ದತ್ತಾಂಶವನ್ನು ಸ್ವೀಕರಿಸುವ ಮೇಲ್ವಿಚಾರಕನನ್ನೂ ಉಸ್ತುವಾರಿ ಮಾಡುತ್ತಾರೆ.

ಜಿ. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಕೃಷಿ ಇಲಾಖೆ ಇವರ ಸಹ-ಅಧ್ಯಕ್ಷತೆಯಲ್ಲಿ ಯೋಜನೆಯನ್ನು ನಿಯತಕಾಲಿಕವಾಗಿ ಮೇಲ್ವಿಚಾರಣೆ ಮಾಡಲು ಮತ್ತು ಬೆಳೆ ಸಮೀಕ್ಷೆಯ ಮಾಹಿತಿಯ ಬಳಕೆಯ ಬಗ್ಗೆ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ರಚಿಸಿರುವ ರಾಜ್ಯ ಮಟ್ಟದ ಉಸ್ತುವಾರಿ ಸಮಿತಿಯನ್ನು ಮುಂದುವರೆಸಿದೆ.

**ಹೆಚ್**. ಕೃಷಿ ಆಯುಕ್ತರ ಅಧ್ಯಕ್ಷತೆಯಲ್ಲಿ ತೋಟಗಾರಿಕೆ, ರೇಷ್ಮೆ ಇಲಾಖೆಗಳ ಮತ್ತು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಸದಸ್ಯರನ್ನೊಳಗೊಂಡಂತೆ ರಚಿಸಿರುವ ರಾಜ್ಯ ಮಟ್ಟದ ಉಸ್ತುವಾರಿ ಸಮಿತಿಯ ಉಪಸಮಿತಿಯನ್ನು ಮುಂದುವರೆಸಿದೆ. ಈ ಉಪ ಸಮಿತಿಯು ಯೋಜನೆಯನ್ನು ನಿಯತಕಾಲಿಕವಾಗಿ ಮೇಲ್ವಿಚಾರಣೆ ಮಾಡುವುದರ ಜೊತೆಗೆ ರಾಜ್ಯ ಮಟ್ಟದ ಉಸ್ತುವಾರಿ ಸಮಿತಿಗೆ ಅನುವು ಮಾಡುವ ಕಾರ್ಯವನ್ನು ನಿರ್ವಹಿಸುವುದು.

P. Sati 3/8/21

**(ಪಿ. ಸತ್ಯಭಾಮ)**

**ಸರ್ಕಾರದ ಅಧೀನ ಕಾರ್ಯದರ್ಶಿ**

**ಕೃಷಿ ಇಲಾಖೆ(ಯೋಜನೆ)**

3/8

**ಅನುಬಂಧ-3**

**ಬೆಳೆ ಸಮೀಕ್ಷೆ ಯೋಜನೆಯ ಕಾರ್ಯ ವಿಧಾನ ಹಾಗೂ ವಿವಿಧ ಇಲಾಖೆಗಳ, ಸಂಸ್ಥೆಗಳ, ಸಮಿತಿಗಳ ಹಾಗೂ ಅಧಿಕಾರಿಗಳ ಜವಾಬ್ದಾರಿಗಳು**

1. **ರಾಜ್ಯ ಮಟ್ಟದ ನೋಡಲ್ ಇಲಾಖೆ (ಕೃಷಿ ಇಲಾಖೆ)ಯ ಪಾತ್ರ**

ಅ. **ಬೆಳೆ ಮಾಹಿತಿ ಸಂಗ್ರಹಣೆ, ಪರಿಶೀಲನೆ ಮತ್ತು ಅನುಮೋದನೆ.**

i. ಅನುದಾನ ಗುರುತಿಸುವಿಕೆ.

ii. ಬೆಳೆ ಸಮೀಕ್ಷೆ ಸಾಫ್ಟ್‌ವೇರ್ ಅನ್ನು ಪರೀಕ್ಷಿಸುವುದು (ಯಾವುದಾದರೂ ಇದ್ದರೆ) ಮತ್ತು ಯುಎಟಿ (User Acceptance Testing) ಒದಗಿಸುವುದು.

iii. ಖಾಸಗಿ ನಿವಾಸಿಗಳಿಗೆ ತರಬೇತಿ

iv. ಮಾಸ್ಟರ್ ತರಬೇತುದಾರರಿಗೆ ತರಬೇತಿ

v. ನಿಯಮಿತವಾಗಿ ಕ್ಷೇತ್ರ ಮಟ್ಟದ ಅಧಿಕಾರಿಗಳೊಂದಿಗೆ ಸಮಾಲೋಚನೆ

vi. ಸಾಫ್ಟ್‌ವೇರ್ ಅಭಿವೃದ್ಧಿ ಮತ್ತು ಬದಲಾವಣೆಯಲ್ಲಿ ಇ-ಆಡಳಿತ ಇಲಾಖೆಯೊಂದಿಗೆ ಸಮನ್ವಯ ಸಾಧಿಸುವುದು

vii. ವ್ಯವಸ್ಥೆಯ ಅಧ್ಯಯನ ಮತ್ತು ಬದಲಾವಣೆಯ ಅವಶ್ಯಕತೆ ಗುರುತಿಸುವಿಕೆ.

viii. ಪತ್ರಗಳು, ಸುತ್ತೋಲೆಗಳು ಮತ್ತು ಸರ್ಕಾರದ ಆದೇಶಗಳ ಮೂಲಕ ಸ್ಪಷ್ಟೀಕರಣ ನೀಡುವುದು (ತಾಂತ್ರಿಕ ಮತ್ತು ಆಡಳಿತ)

ix. ಖಾಸಗಿ ನಿವಾಸಿಗಳ ನೇಮಕಾತಿಯಲ್ಲಿ ಜಿಲ್ಲಾ / ತಾಲ್ಲೂಕು ಮಟ್ಟದ ಸಮಿತಿಗಳೊಂದಿಗೆ ಸಮನ್ವಯ ಸಾಧಿಸುವುದು

x. ಬೆಳೆ ಸಮೀಕ್ಷೆಯ ಪ್ರಗತಿಯನ್ನು ಮೇಲ್ವಿಚಾರಣೆ ಮಾಡುವುದು.

xi. ಖಾಸಗಿ ನಿವಾಸಿಗಳೊಂದಿಗೆ ಸಮಾಲೋಚನೆ ನಡೆಸುವುದು ಮತ್ತು ಅವರ ಸಮಸ್ಯೆಗಳನ್ನು ಪರಿಹರಿಸುವುದು

xii. ಬೆಳೆ ಸಮಿಕ್ಷೆ ಕಾರ್ಯತಂಡ (CSWG/PMU) ಹಾಗೂ ಸಹಾಯವಾಣಿ ಕೇಂದ್ರದ (Help desk) ನಿರ್ವಹಣೆ ಮತ್ತು ಉಸ್ತುವಾರಿ.

xiii. ಮಾಹಿತಿ ಸಂಗ್ರಹಣೆಯಲ್ಲಿ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಸಮಿತಿಗಳೊಂದಿಗೆ ಸಮನ್ವಯ ಸಾಧಿಸುವುದು.

xiv. ಸಂಬಂಧಿಸಿದ (ಡೊಮೈನ್) ಇಲಾಖೆಗಳ (ಕೃಷಿ / ತೋಟಗಾರಿಕೆ / ರೇಷ್ಮೆ) ಸಮಾಲೋಚನೆ ಮತ್ತು ಪರಸ್ಪರ ಪಾಲ್ಗೊಳ್ಳುವಿಕೆ ಬಗ್ಗೆ ಖಾತರಿಪಡಿಸಿಕೊಳ್ಳುವುದು.

xv. 3ನೇ ಬಾಹ್ಯ ಸಂಸ್ಥೆಯ ನೇಮಕಾತಿ ಮತ್ತು 3ನೇ ಬಾಹ್ಯ ಸಂಸ್ಥೆಯ ದತ್ತಾಂಶ/ಮಾಹಿತಿಯ ವಿಶ್ಲೇಷಣೆ.

xvi. ಆಗಿಂದಾಗ್ಗೆ ಬರುವ ಸಮಸ್ಯೆಗಳ ಕುರಿತು ರಾಜ್ಯ ಮಟ್ಟದ ಉಸ್ತುವಾರಿ ಸಮಿತಿ/ಉಪಸಮಿತಿಯ ಮುಂದೆ ಮಂಡಿಸಿ ಅವುಗಳ ಬಗ್ಗೆ ತೀರ್ಮಾನಗಳನ್ನು/ ಪರಿಹಾರಗಳನ್ನು ಪಡೆಯುವುದು.

xvii. ಜಿಲ್ಲಾ ಮಟ್ಟದಲ್ಲಿ ಎಲ್ಲಾ ಇಲಾಖೆಗಳು ಮಾಹಿತಿ ಸಂಗ್ರಹಣೆ ಮತ್ತು ಪರಿಶೀಲನೆ ಕಾರ್ಯದಲ್ಲಿ ತೊಡಗಿಸಿಕೊಳ್ಳುವುದನ್ನು ಖಚಿತಪಡಿಸಿಕೊಳ್ಳುವುದು.

xviii. ಬೆಳೆ ದತ್ತಾಂಶ/ಮಾಹಿತಿಯನ್ನು ಅಂತಿಮಗೊಳಿಸುವಲ್ಲಿ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸುವುದು.

xix. ತಾಲ್ಲೂಕು ಮಟ್ಟದಲ್ಲಿ ಗುಣಮಟ್ಟದ ಖಾತರಿ ಅಧಿಕಾರಿಗಳ ನೇಮಕಾತಿಯನ್ನು ಖಚಿತಪಡಿಸಿಕೊಳ್ಳುವುದು.

xx. ಮಾಹಿತಿಯ ಗುಣಮಟ್ಟವನ್ನು ತಿಳಿದುಕೊಳ್ಳುವಲ್ಲಿ ಮತ್ತು ಸರಿಪಡಿಸುವ ಕ್ರಮ ತೆಗೆದುಕೊಳ್ಳುವಲ್ಲಿ ನಿಯತಕಾಲಿಕವಾಗಿ ಗುಣಮಟ್ಟದ ಖಾತರಿ ಅಧಿಕಾರಿಗಳೊಂದಿಗೆ ವಿಮರ್ಶೆ ಮಾಡುವುದು.

xxi. ಬೆಳೆ ಸಮೀಕ್ಷೆಗಾರರಿಗೆ (ಖಾಸಗಿ ನಿವಾಸಿಗಳಿಗೆ ಹಾಗೂ ಸರ್ಕಾರಿ ಸಿಬ್ಬಂದಿಗಳಿಗೆ) ಗೌರವಧನ ಪಾವತಿಸಲು ಕ್ರಮ ಕೈಗೊಳ್ಳುವುದು.

xxii. ಇ-ಆಡಳಿತ ಇಲಾಖೆಯ ಕೋರಿಕೆಯಂತೆ ತಂತ್ರಾಂಶದ ತೃಪ್ತಿದಾಯಕ ಕಾರ್ಯಕ್ಷಮತೆಯ ಲೆಕ್ಕಪರಿಶೋಧನೆ ಮತ್ತು ಪ್ರಮಾಣೀಕರಣ.

**ಆ. ಬೆಳೆ ಸಮೀಕ್ಷೆ ದತ್ತಾಂಶ ಬಳಕೆ**

i. ಕಂದಾಯ, ಆಹಾರ, ಕೃಷಿ, ತೋಟಗಾರಿಕೆ, ರೇಷ್ಮೆ, ಕೃಷಿ ಮಾರುಕಟ್ಟೆ ಮುಂತಾದ ಬಳಕೆದಾರ ಇಲಾಖೆಗಳೊಂದಿಗೆ ಸಂವಹನ ಮತ್ತು ಸಹಕಾರ.

ii. ಸದರಿ ಇಲಾಖೆಗಳ ಅವಶ್ಯಕತೆ ಬಗ್ಗೆ ತಿಳಿಯುವುದು.

iii. ಇ-ಆಡಳಿತ ಇಲಾಖೆಯಿಂದ ನೋಡಲ್ ಇಲಾಖೆಗೆ ಮತ್ತು ತನ್ಮೂಲಕ ಇತರೆ ಇಲಾಖೆಗಳಿಗೆ ಒದಗಿಸಿದ ತಂತ್ರಾಂಶಗಳ ಪರಿಶೋಧನೆ, ಪರೀಕ್ಷೆ ಮತ್ತು ಯುಎಟಿ (User Acceptance Testing)

iv. ಇಲಾಖೆಗಳಿಗೆ, ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಗೆ ಹಾಗೂ ಇತರೆ ಅವಶ್ಯಕತೆಯಿರುವ ಸಂಸ್ಥೆಗಳಿಗೆ ಅವರ ಅಗತ್ಯಕ್ಕೆ ಅನುಗುಣವಾಗಿ ಮಾಹಿತಿಯನ್ನು ಒದಗಿಸುವುದು.

v. ತಂತ್ರಾಂಶಗಳ ನವೀಕರಣ ಅಥವಾ ಬದಲಾವಣೆಗಳು ಮತ್ತು ಮಾಹಿತಿಗೆ ಸಂಬಂಧಿತ ಸಮಸ್ಯೆಗಳಿಗೆ ಇ-ಆಡಳಿತ ಇಲಾಖೆಯೊಂದಿಗೆ ಸಮನ್ವಯ.

2. **ಇ-ಆಡಳಿತ ಇಲಾಖೆಯ ಪಾತ್ರ**

i. ಎಸ್.ಡಿ.ಸಿ.ಯಲ್ಲಿ ಹಾರ್ಡ್‌ವೇರ್ ಮೂಲಸೌಕರ್ಯ ಒದಗಿಸುವುದು.

ii. ಬೆಳೆ ಸಮೀಕ್ಷೆ ಮತ್ತು ಬೆಳೆ ಸಮೀಕ್ಷೆ ಮಾಹಿತಿಯ ಬಳಕೆಗೆ ಅಗತ್ಯವಿರುವ ಬೆಳೆ ಸಮೀಕ್ಷೆ ಆ್ಯಪ್ ಗಳ ಅಭಿವೃದ್ಧಿ / ಸುಧಾರಣೆ / ಮಾರ್ಪಾಡು ಮತ್ತು ಸಾಫ್ಟವೇರ್ ಅಭಿವೃದ್ಧಿ.

iii. ನೋಡಲ್ ಇಲಾಖೆಯ ಪ್ರಮುಖ ಸಂಪನ್ಮೂಲ ವ್ಯಕ್ತಿಗಳಿಗೆ ತರಬೇತಿ.

iv. ನೋಡಲ್ ಇಲಾಖೆ ಕೇಳುವ ಸಾಫ್ಟವೇರ್ ಸಂಬಂಧಿತ ಸಮಸ್ಯೆಗಳನ್ನು ಅಭಿವೃದ್ಧಿ ತಂಡದೊಂದಿಗೆ ಸಮನ್ವಯಗೊಳಿಸುವ ಮೂಲಕ ಪರಿಹರಿಸುವುದು.

v. ಎಲ್ಲಾ ಕಚ್ಚಾ ಹಾಗೂ ಸಂಸ್ಕರಿತ ದತ್ತಾಂಶವನ್ನು ಕೃಷಿ, ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ ಮತ್ತು ಇ-ಆಡಳಿತ ಇಲಾಖೆಗಳಲ್ಲಿ ಏಕಕಾಲದಲ್ಲಿ ಲಭ್ಯವಾಗಿಸುವುದು (hosted). ದತ್ತಾಂಶ ಮಾಹಿತಿಗೆ access to data ಕೃಷಿ ಹಾಗೂ ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಗೆ ನೀಡತಕ್ಕದ್ದು.

3. **ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಪಾತ್ರ:**

i. ಮೊಬೈಲ್ ಆ್ಯಪ್ ಗಳಲ್ಲಿ ಹೆಚ್ಚುವರಿ ಮಾಹಿತಿ ಸಂಗ್ರಹಿಸಿ ಅಪ್ಲೋಡ್ ಮಾಡಬೇಕಾದಲ್ಲಿ ಸಲಹೆಗಳನ್ನು ನೀಡುವುದು.

ii. ನಿಯತಕಾಲಿಕವಾಗಿ ಮಾಹಿತಿಯನ್ನು ರಾಜ್ಯ ಮಟ್ಟದಲ್ಲಿ ಮೇಲ್ವಿಚಾರಣೆ ಮಾಡುವುದು.

iii. ರಾಜ್ಯ ಮಟ್ಟದಲ್ಲಿ ಕೃಷಿ ಇಲಾಖೆಯು ಯೋಜನೆಯ ಮುಂದಾಳತ್ವ ವಹಿಸುತ್ತದೆ. ಡಿಇಎಸ್ ಸಹ ಇದರಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವುದು ಮತ್ತು ಕಂದಾಯ ಇಲಾಖೆಯ ಅಧಿಸೂಚನೆ ಸಂಖ್ಯೆ:ಆರ್‌ಡಿ 23 ಇಎಲ್‌ಆರ್ 2004 ದಿನಾಂಕ:06.05.2005 ಮತ್ತು ದಿನಾಂಕ:03.02.2020 ರಂತೆ ರಚಿಸಿರುವ ಜಿಲ್ಲಾ, ತಾಲೂಕು ಮತ್ತು ಹೋಬಳಿ ಮಟ್ಟದ ಸಮಿತಿಗಳು ಮಾಹಿತಿ/ದತ್ತಾಂಶಕ್ಕೆ ಸಹಿ ಮಾಡುವುದನ್ನು ಖಾತರಿಪಡಿಸಿಕೊಳ್ಳುವುದು.

iv. ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ವತಿಯಿಂದ ಮಾಹಿತಿಯನ್ನು ಅನುಮೋದಿಸುವುದರಿಂದ, ಶೇ.1 ರಷ್ಟು ಮಾಹಿತಿಯ ಮೂರನೇ ವ್ಯಕ್ತಿಯ ಲೆಕ್ಕಪರಿಶೋಧನೆ ಮಾಡುವುದನ್ನು ಜಿಲ್ಲಾ ಸಾಂಖ್ಯಿಕ ಅಧಿಕಾರಿ ಅಥವಾ ಜಿಲ್ಲಾ/ತಾಲ್ಲೂಕು ಮಟ್ಟದಲ್ಲಿ ಲಭ್ಯವಿರುವ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಪ್ರತಿನಿಧಿಯಿಂದ ಕೈಗೊಳ್ಳಲು ನಿರ್ಧರಿಸಲಾಗಿದೆ.

4. **ಕಂದಾಯ, ತೋಟಗಾರಿಕೆ, ರೇಷ್ಮೆ ಮತ್ತು ನೀರಾವರಿ ಇಲಾಖೆಗಳ ಪಾತ್ರ:**

i. ಬೆಳೆ ಸಮೀಕ್ಷೆಯ ಚಟುವಟಿಕೆಯನ್ನು ಮೇಲ್ವಿಚಾರಣೆ ಮಾಡಲು ತಮ್ಮ ಇಲಾಖೆಯ ಎಲ್ಲಾ ಕ್ಷೇತ್ರ ಮಟ್ಟದ ಅಧಿಕಾರಿಗಳು / ಸಿಬ್ಬಂದಿಗೆ ನಿರ್ದೇಶನಗಳನ್ನು ನೀಡುವ ಮೂಲಕ ಜಿಲ್ಲಾ ಆಡಳಿತಕ್ಕೆ ಸಹಾಯ ಮಾಡುವುದು.

ii. ಕೃಷಿ ಇಲಾಖೆಯು ನೋಡಲ್ ಇಲಾಖೆಯಾಗಿದ್ದು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯವು ದತ್ತಾಂಶವನ್ನು ಸಮನ್ವಯಗೊಳಿಸುವುದನ್ನು ಮುಂದುವರಿಸಿ, ತಾಲ್ಲೂಕು, ಜಿಲ್ಲಾ ಮತ್ತು ರಾಜ್ಯ ಮಟ್ಟದ ಸಮಿತಿಯ ಅನುಮೋದನೆಯನ್ನು ಪಡೆದು ಅಂತಿಮ ಮಾಹಿತಿ/ ದತ್ತಾಂಶವನ್ನು ಸಹಿ ಮಾಡುವುದು.

iii. ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳು ಒಟ್ಟಾರೆ ಯೋಜನೆಯ ಉಸ್ತುವಾರಿ ವಹಿಸಲಿದ್ದು, ಖಾಸಗಿ ನಿವಾಸಿಗಳು ಮತ್ತು ಯೋಜನೆಯ ದೈನಂದಿನ ಮೇಲ್ವಿಚಾರಣೆಯನ್ನು ಜಿಲ್ಲಾ ಮಟ್ಟದಲ್ಲಿ ಅಪರ ಜಿಲ್ಲಾಧಿಕಾರಿಗಳು ಮತ್ತು ಜಂಟಿ ಕೃಷಿ ನಿರ್ದೇಶಕರು ಹಾಗು ರಾಜ್ಯ ಮಟ್ಟದಲ್ಲಿ ಕೃಷಿ ಆಯುಕ್ತರು ವಹಿಸುವುದು.

ಕೃಷಿ ಆಯುಕ್ತರ ಅಧ್ಯಕ್ಷತೆಯಲ್ಲಿ ತೋಟಗಾರಿಕೆ, ರೇಷ್ಮೆ ಇಲಾಖೆಗಳ ಮತ್ತು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ಮತ್ತು ಇತರೆ ಸದಸ್ಯರನ್ನೊಳಗೊಂಡಂತೆ ರಚಿಸಿರುವ ರಾಜ್ಯ ಮಟ್ಟದ ಉಸ್ತುವಾರಿ ಸಮಿತಿಯ ಉಪ ಸಮಿತಿಯನ್ನು ಮುಂದುವರೆಸಿದೆ.

5. **ರಾಜ್ಯ ಮಟ್ಟದ ಉಸ್ತುವಾರಿ ಸಮಿತಿಯ (ಎಸ್‌ಎಲ್‌ಎಂಸಿ) ಪಾತ್ರ**

i. ಬೆಳೆ ಸಮೀಕ್ಷೆಯ ಪ್ರಗತಿಯ ಮೇಲ್ವಿಚಾರಣೆ.

ii. ಬೆಳೆ ಸಮೀಕ್ಷೆ ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ವಿವಿಧ ಘಟಕಗಳಿಗೆ ನಿರ್ದೇಶನ.

iii. ಸರ್ಕಾರದಲ್ಲಿ ಬೆಳೆ ಸಮೀಕ್ಷೆಯ ಮಾಹಿತಿಯ ಬಳಕೆ ನಿರ್ಧರಣೆ.

iv. ನೋಡಲ್ ಇಲಾಖೆಯು ಅನುಷ್ಠಾನದ ಹಂತದಲ್ಲಿ ಕೇಳುವ ವಿಷಯಗಳ ಬಗ್ಗೆ ನಿರ್ಧಾರ.

v. ಮಾಹಿತಿ ಸಂಗ್ರಹಣೆ ಅವಧಿಯಲ್ಲಿ ಹಾಗೂ ಮಾಹಿತಿ ಬಳಕೆ ಅವಧಿಯಲ್ಲಿ ಅಗತ್ಯಾನುಸಾರ ಸಭೆ ಆಯೋಜನೆ.

vi. ರೈತರು ಬೆಳೆ ಸಮೀಕ್ಷೆ ಮಾಡಿ ಮಾಹಿತಿಯನ್ನು ಅಪ್ಲೋಡ್ ಮಾಡಲು ಪ್ರತಿ ಹಂಗಾಮಿಗೆ (ಪೂರ್ವ ಮುಂಗಾರು, ಮುಂಗಾರು/ ಹಿಂಗಾರು/ಬೇಸಿಗೆ) ಕೊನೆಯ ದಿನಾಂಕವನ್ನು (cut-off dates) ನಿಗದಿಪಡಿಸುವುದು.

6. **ಜಿಲ್ಲಾ ಆಡಳಿತದ ಪಾತ್ರ** :

i. ಜಿಲ್ಲಾಧಿಕಾರಿಗಳು ಜಿಲ್ಲಾಮಟ್ಟದ ಅನುಷ್ಠಾನ ಪ್ರಾಧಿಕಾರವಾಗಿರುತ್ತಾರೆ.

ii. ಮಾಹಿತಿ/ದತ್ತಾಂಶ ಸಂಗ್ರಹಣೆ ಚಟುವಟಿಕೆಯಲ್ಲಿ ಕೃಷಿ ಮತ್ತು ಎಲ್ಲಾ ಸಂಬಂಧಿತ ಇಲಾಖೆಗಳ ಪಾಲ್ಗೊಳ್ಳುವಿಕೆಯನ್ನು ಖಚಿತಪಡಿಸುವುದು.

iii. ಕಂದಾಯ, ಕೃಷಿ, ರೇಷ್ಮೆ, ತೋಟಗಾರಿಕೆ ಮತ್ತು ನೀರಾವರಿ ಇಲಾಖೆಗಳ ಸರ್ಕಾರಿ ಅಧಿಕಾರಿಗಳಿಗೆ ಉಸ್ತುವಾರಿ ಮಾಡಲು ಗ್ರಾಮಗಳ ಹಂಚಿಕೆ ಮಾಡುವುದು.

iv. ಬೆಳೆ ಸಮೀಕ್ಷೆ ಚಟುವಟಿಕೆಯನ್ನು ನಡೆಸಲು ಖಾಸಗಿ ನಿವಾಸಿಗಳಿಗೆ ನಿಗದಿಪಡಿಸಿದ ಪ್ರತಿಯೊಂದು ಹಳ್ಳಿಗೆ ಒಬ್ಬ ಅಥವಾ ಹೆಚ್ಚಿನ ಖಾಸಗಿ ನಿವಾಸಿಗಳ ಗುರುತಿಸುವಿಕೆ ಮತ್ತು ನೇಮಕಾತಿಯನ್ನು ಮೇಲ್ವಿಚಾರಣೆ ಮಾಡುವುದು.

v. ತಾಲ್ಲೂಕು ಮಟ್ಟದಲ್ಲಿ ಮಾಸ್ಟರ್ ತರಬೇತುದಾರರ ಮೂಲಕ ಖಾಸಗಿ ನಿವಾಸಿಗಳಿಗೆ ತರಬೇತಿ.

vi. ಬೆಳೆ ಸಮೀಕ್ಷೆ ಚಟುವಟಿಕೆಯ ಕುರಿತು ಪ್ರಚಾರ ಮತ್ತು ಜಾಹೀರಾತು.

vii. ಪ್ರಗತಿಯನ್ನು ಉಸ್ತುವಾರಿ ಮಾಡುವುದು ಮತ್ತು ಮಾಹಿತಿಯನ್ನು ಪ್ರಮಾಣೀಕರಿಸುವುದು.

viii. ದಿನಾಂಕ:06.05.2005 ಮತ್ತು ದಿನಾಂಕ:03.02.2020ರ ಕಂದಾಯ ಇಲಾಖೆಯ ಅಧಿಸೂಚನೆಯಂತೆ ರಚಿಸಿರುವ ಜಿಲ್ಲಾ ಮತ್ತು ತಾಲೂಕು ಮಟ್ಟದ ಸಮಿತಿಗಳ ಮೂಲಕ ಸಂಗ್ರಹಿಸಲಾದ ಮಾಹಿತಿಯನ್ನು ವಾರಕ್ಕೊಮ್ಮೆ ಪರಿಶೀಲಿಸುವುದು ಮತ್ತು ಅವಶ್ಯಕತೆ ಇದ್ದಾಗ ಸರಿಪಡಿಸುವಲ್ಲಿ ಕ್ರಮಗಳನ್ನು ಕೈಗೊಳ್ಳುವುದು.

ix. ಕಂದಾಯ ಇಲಾಖೆಯ ಅಧಿಸೂಚನೆಯಂತೆ ಗ್ರಾಮ ಮತ್ತು ಹೋಬಳಿ ಮಟ್ಟದಲ್ಲಿ ಸಂಗ್ರಹಿಸಲಾದ ಹಾಗೂ ಮರುಹೊಂದಾಣಿಕೆ ಮಾಡಲಾದ ಮಾಹಿತಿಯನ್ನು ಅನುಮೋದಿಸಲು ಅಧಿಕಾರಿಗಳ ತಂಡವನ್ನು ರಚಿಸುವುದು.

7. **ತಹಶೀಲ್ದಾರ್‌ರವರ ಪಾತ್ರ** :

i. ತಾಲೂಕು ಮಟ್ಟದ ಸಮಿತಿಯ ಮೂಲಕ ಕಂದಾಯ, ಕೃಷಿ, ರೇಷ್ಮೆ, ತೋಟಗಾರಿಕೆ ಮತ್ತು ನೀರಾವರಿ ಇಲಾಖೆಗಳ ಸರ್ಕಾರಿ ಅಧಿಕಾರಿಗಳಿಗೆ ಗ್ರಾಮ (ಗಳನ್ನು) ಹಂಚಿಕೆ ಮಾಡುವುದು.

ii. ತಾಲ್ಲೂಕು ಮಟ್ಟದ ಸಮಿತಿಯ ಮೂಲಕ ಬೆಳೆ ಸಮೀಕ್ಷೆ ಚಟುವಟಿಕೆಯನ್ನು ನಡೆಸಲು ಪ್ರತಿ ಗ್ರಾಮಕ್ಕೂ ಖಾಸಗಿ ನಿವಾಸಿಗಳನ್ನು ಗುರುತಿಸುವುದು ಮತ್ತು ನೇಮಕ ಮಾಡುವುದು.

iii. ತಾಲ್ಲೂಕು ಮಟ್ಟದ ಸಮಿತಿಯ ಮೂಲಕ ಸರ್ಕಾರಿ ಅಧಿಕಾರಿಗಳ ಅಡಿ ಕಾರ್ಯನಿರ್ವಹಿಸಲು ಗ್ರಾಮಗಳಿಗೆ ಖಾಸಗಿ ನಿವಾಸಿಗಳ ಹಂಚಿಕೆ.

iv. ಮಾಸ್ಟರ್ ತರಬೇತುದಾರರ ಮೂಲಕ ಖಾಸಗಿ ನಿವಾಸಿಗಳಿಗೆ ತರಬೇತಿ.

v. ಯೋಜನೆಯ ಪ್ರಗತಿಯನ್ನು ಉಸ್ತುವಾರಿ ಮಾಡುವುದು.

vi. ದಿನಾಂಕ:06.05.2005 ಮತ್ತು ದಿನಾಂಕ:03.02.2020ರ ಕಂದಾಯ ಇಲಾಖೆಯ ಅಧಿಸೂಚನೆಯಂತೆ ರಚಿಸಿರುವ ತಾಲೂಕು ಮಟ್ಟದ ಸಮಿತಿಗಳ ಮೂಲಕ ಸಂಗ್ರಹಿಸಲಾದ ಮಾಹಿತಿಯನ್ನು ವಾರಕ್ಕೊಮ್ಮೆ ಪರಿಶೀಲಿಸುವುದು ಮತ್ತು ಅವಶ್ಯಕತೆ ಇದ್ದಲ್ಲಿ ಸರಿಪಡಿಸುವಲ್ಲಿ ಕ್ರಮಗಳನ್ನು ಕೈಗೊಳ್ಳುವುದು ಹಾಗೂ ಕ್ಷೇತ್ರವಾರು ಮರುಹೊಂದಾಣಿಕೆ ಮಾಡುವುದು.

vii. ಕಂದಾಯ ಇಲಾಖೆಯ ಅಧಿಸೂಚನೆಯಂತೆ ಗ್ರಾಮ ಮತ್ತು ಹೋಬಳಿ ಮಟ್ಟದಲ್ಲಿ ಸಂಗ್ರಹಿಸಲಾದ ಮಾಹಿತಿಯನ್ನು ಅನುಮೋದಿಸಲು ಅಧಿಕಾರಿಗಳ ತಂಡವನ್ನು ರಚಿಸುವುದು.

8. **ತಾಲ್ಲೂಕು ಮಟ್ಟದ ಗುಣಮಟ್ಟದ ಖಾತರಿ ಅಧಿಕಾರಿ (QAO) ಪಾತ್ರ:**

i. ಕೃಷಿ, ರೇಷ್ಮೆ ಮತ್ತು ತೋಟಗಾರಿಕೆ ಇಲಾಖೆಗಳಿಂದ ಒಬ್ಬ ತಾಲೂಕು ಮಟ್ಟದ ಅಧಿಕಾರಿಯನ್ನು ಗುಣಮಟ್ಟದ ಖಾತರಿ ಅಧಿಕಾರಿ(ಕ್ಯೂಎಒ) ಯಾಗಿ ನೇಮಿಸಲಾಗುವುದು.

ii. ಮಾಹಿತಿಯನ್ನು ಸಮಗ್ರವಾಗಿ ಉಸ್ತುವಾರಿ/ ಮೇಲ್ವಿಚಾರಣೆ ಮಾಡುವುದು.

iii. ಕ್ಷೇತ್ರದಿಂದ ಬರುವ ಮಾಹಿತಿಯ ಗುಣಮಟ್ಟವನ್ನು ನಿಯತಕಾಲಿಕವಾಗಿ ಪರಿಶೀಲಿಸಲು ಮತ್ತು ಅಗತ್ಯವಿರುವ ಕಡೆ ಪುನರ್ ಸಮೀಕ್ಷೆ ಮಾಡಲು ಸಂಬಂಧಿಸಿದ ಮೇಲ್ವಿಚಾರಕರಿಗೆ ತಿಳಿಸುವುದು.

iv. ಉತ್ತಮ ಗುಣಮಟ್ಟದ ಮಾಹಿತಿಯನ್ನು ಪಡೆಯುವುದು ಹಾಗೂ ಮಾಹಿತಿಯನ್ನು ಸ್ವೀಕರಿಸುವ ಮೇಲ್ವಿಚಾರಕರನ್ನು ಮೇಲ್ವಿಚಾರಣೆ ಮಾಡುವುದು ಇವರ ಜವಾಬ್ದಾರಿಯಾಗಿರುತ್ತದೆ.

9. **ಗ್ರಾಮ ಮಟ್ಟದ ಸರ್ಕಾರಿ ಅಧಿಕಾರಿಗಳು (ಮೇಲ್ವಿಚಾರಕರು):**

i. ತಮಗೆ ನಿಗದಿಪಡಿಸಿದ ಗ್ರಾಮಗಳಲ್ಲಿ ಬೆಳೆ ಸಮೀಕ್ಷೆ ಚಟುವಟಿಕೆಯನ್ನು ಕೈಗೊಳ್ಳಲು ಪ್ರತಿ ಗ್ರಾಮಕ್ಕೆ ಒಬ್ಬ ಅಥವಾ ಹೆಚ್ಚಿನ ಖಾಸಗಿ ನಿವಾಸಿಗಳ ಗುರುತಿಸುವುದು.

ii. ಅಧಿಕಾರಿಗಳ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ರೈತರು ಹಾಗೂ ಖಾಸಗಿ ನಿವಾಸಿಗಳು ನಮೂದಿಸಿದ ಬೆಳೆ ಮಾಹಿತಿಯನ್ನು ಪರಿಶೀಲಿಸಿ, ಛಾಯಾಚಿತ್ರ ಮತ್ತು ನಮೂದಿಸಿದ ಹೆಸರನ್ನು ತಾಳೆ ಮಾಡಿ ಅದನ್ನು ಅನುಮೋದಿಸುವುದು.

iii. ಪ್ರಗತಿಯನ್ನು ಮೇಲ್ವಿಚಾರಣೆ ಮಾಡುವುದು ಮತ್ತು ಮಾಹಿತಿಯನ್ನು ಪ್ರಮಾಣೀಕರಿಸುವುದು.

iv. ರೈತರು ಹಾಗೂ ಖಾಸಗಿ ನಿವಾಸಿಗಳು ಅಪ್ಲೋಡ್ ಮಾಡಿದ ಮಾಹಿತಿಯು ತಪ್ಪಾಗಿದ್ದಲ್ಲಿ ಮರು ಸಮೀಕ್ಷೆಗಾಗಿ ಹಿಂದಿರುಗಿಸುವುದು.

10. **ಖಾಸಗಿ ನಿವಾಸಿಗಳ (ಬೆಳೆ ಸಮೀಕ್ಷೆದಾರರು) ಪಾತ್ರ:**

i. ಖಾಸಗಿ ನಿವಾಸಿಗಳು ಸಾಧ್ಯವಾದಷ್ಟು ಬೇಗ ಮತ್ತು ರೈತರು ಬೆಳೆಸಮೀಕ್ಷೆ ಕೈಗೊಳ್ಳುವ ಕೊನೆಯ ದಿನಾಂಕದವರೆಗೆ ಸಮೀಕ್ಷೆಯ ಹೊಸ ಅಂಶಗಳ ಬಗ್ಗೆ ರೈತರಲ್ಲಿ ಅರಿವು ಮೂಡಿಸುವುದರ ಜೊತೆಗೆ ಅವರಿಗೆ ತಾಂತ್ರಿಕ ಮಾರ್ಗದರ್ಶನ ನೀಡಿ ರೈತರು ತಮ್ಮ ಜಮೀನಿನ ಬೆಳೆ ವಿವರಗಳನ್ನು ಛಾಯಾಚಿತ್ರ ಸಹಿತ ಅಪ್ಲೋಡ್ ಮಾಡಲು ಪ್ರೋತ್ಸಾಹಿಸುವುದು.

ii. ಕೊನೆಯ ದಿನಾಂಕದ ನಂತರ, ಬಿಟ್ಟುಹೋದ ತಾಕುಗಳನ್ನು (ಸರ್ವೆ ನಂಬರ್ ಮತ್ತು ಅದರ ಹಿಸ್ಸಾಗಳು) ಬೆಳೆ ಸಮೀಕ್ಷೆ ಮಾಡುವುದು.

iii. ರೈತರು ಹಾಗೂ ಖಾಸಗಿ ನಿವಾಸಿಗಳು ಅಪ್ಲೋಡ್ ಮಾಡಿದ ಮಾಹಿತಿಯು ತಪ್ಪಾಗಿದ್ದಲ್ಲಿ ಮೇಲ್ವಿಚಾರಕರು ಮರು ಸಮೀಕ್ಷೆಗಾಗಿ ಗುರುತಿಸಲಾಗಿರುವ ಕ್ಷೇತ್ರಗಳಿಗೆ ರೈತರು/ಹಕ್ಕುದಾರರೊಂದಿಗೆ ಭೇಟಿ ನೀಡಿ, ಬೆಳೆಗಳ ಫೋಟೋ ತೆಗೆದು ಅದರ ಮಾಹಿತಿಯನ್ನು ಅಪ್ಲೋಡ್ ಮಾಡುವುದು.

(ಪಿ. ಸತ್ಯಭಾಮ) 3/8/24

ಸರ್ಕಾರದ ಅಧೀನ ಕಾರ್ಯದರ್ಶಿ

ಕೃಷಿ ಇಲಾಖೆ(ಯೋಜನೆ)

3/8

## ಅನುಬಂಧ-4

## ಬೆಳೆ ಸಮೀಕ್ಷೆ ಯೋಜನೆ ಅನುಷ್ಠಾನಕ್ಕೆ ರಚಿಸಿರುವ ಸಮಿತಿಗಳು

### ರಾಜ್ಯ ಮಟ್ಟದ ಉಸ್ತುವಾರಿ ಸಮಿತಿ (State Level Monitoring Committee)

| ಕ್ರ ಸಂ | ಹುದ್ದೆ ಮತ್ತು ಪದನಾಮ | ವಿವರ |
|---|---|---|
| 1 | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರು | ಅಧ್ಯಕ್ಷರು |
| 2 | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಕೃಷಿ ಇಲಾಖೆ | ಸಹ ಅಧ್ಯಕ್ಷರು |
| 3 | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಸಿ ಅಸು ಇ (ಇ-ಆಡಳಿತ) | ಸದಸ್ಯರು |
| 4 | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ | ಸದಸ್ಯರು |
| 5 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ | ಸದಸ್ಯರು |
| 6 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ (ವಿ.ನಿ., ಭೂಮಿ ಮತ್ತು ಯುಪಿಒಆರ್) | ಸದಸ್ಯರು |
| 7 | ಸರ್ಕಾರದ ಕಾರ್ಯದರ್ಶಿಗಳು, ಸಹಕಾರ ಇಲಾಖೆ | ಸದಸ್ಯರು |
| 8 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿಮತ್ತು ಪಂಚಾಯತ್ ರಾಜ್ ಇಲಾಖೆ | ಸದಸ್ಯರು |
| 9 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ | ಸದಸ್ಯರು |
| 10 | ಆಯುಕ್ತರು, ಭೂ ಮಾಪನ ಹಾಗೂ ಕಂದಾಯ ವ್ಯವಸ್ಥೆ ಇಲಾಖೆ ಹಾಗೂ ನಿರ್ದೇಶಕರು, ಭೂಮಿ ಮತ್ತು ಯುಪಿಒಆರ್. | ಸದಸ್ಯರು |
| 11 | ಆಯುಕ್ತರು, ಕೃಷಿ ಇಲಾಖೆ | ಸದಸ್ಯ-ಕಾರ್ಯದರ್ಶಿಗಳು |
| 12 | ಆಯುಕ್ತರು/ನಿರ್ದೇಶಕರು, ತೋಟಗಾರಿಕೆ ಇಲಾಖೆ. | ಸದಸ್ಯರು |
| 13 | ಆಯುಕ್ತರು, ರೇಷ್ಮೆ ಇಲಾಖೆ | ಸದಸ್ಯರು |
| 14 | ನಿರ್ದೇಶಕರು, ಆರ್ಥಿಕ ಹಾಗೂ ಸಾಂಖ್ಯಿಕ ಇಲಾಖೆ | ಸದಸ್ಯರು |
| 15 | ಮುಖ್ಯ ಕಾರ್ಯ ನಿರ್ವಹಣಾಧಿಕಾರಿ, CEG | ಸದಸ್ಯರು |

### ರಾಜ್ಯ ಮಟ್ಟದ ಉಸ್ತುವಾರಿ ಸಮಿತಿಯ ಉಪ ಸಮಿತಿ

| ಕ್ರ ಸಂ | ಹುದ್ದೆ ಮತ್ತು ಪದನಾಮ | ವಿವರ |
|---|---|---|
| 1 | ಕೃಷಿ ಆಯುಕ್ತರು, ಕೃಷಿ ಇಲಾಖೆ | ಅಧ್ಯಕ್ಷರು |
| 2 | ಆಯುಕ್ತರು/ ನಿರ್ದೇಶಕರು, ತೋಟಗಾರಿಕೆ ಇಲಾಖೆ | ಸದಸ್ಯರು |
| 3 | ಆಯುಕ್ತರು, ರೇಷ್ಮೆ ಇಲಾಖೆ | ಸದಸ್ಯರು |
| 4 | ನಿರ್ದೇಶಕರು, ಆರ್ಥಿಕ ಹಾಗೂ ಸಾಂಖ್ಯಿಕ ನಿರ್ದೇಶನಾಲಯ | ಸದಸ್ಯರು |
| 5 | ನಿರ್ದೇಶಕರು, ಕೃಷಿ ಇಲಾಖೆ ಹಾಗೂ ಮುಖ್ಯಸ್ಥರು, ಬೆಳೆ ಸಮೀಕ್ಷೆ ಕಾರ್ಯ ತಂಡ. | ಸದಸ್ಯ ಕಾರ್ಯದರ್ಶಿ |

## ಜಿಲ್ಲಾ ಮಟ್ಟದ ಸಮಿತಿ

| ಕ್ರ ಸಂ | ಹುದ್ದೆ ಮತ್ತು ಪದನಾಮ | ವಿವರ |
|---|---|---|
| 1 | ಜಿಲ್ಲಾಧಿಕಾರಿಗಳು | ಅಧ್ಯಕ್ಷರು |
| 2 | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ | ಸಹ–ಅಧ್ಯಕ್ಷರು |
| 3 | ಅಪರ ಜಿಲ್ಲಾಧಿಕಾರಿಗಳು | ನೋಡಲ್ ಅಧಿಕಾರಿ |
| 4 | ಜಂಟಿ ಕೃಷಿ ನಿರ್ದೇಶಕರು | ಸದಸ್ಯ ಕಾರ್ಯದರ್ಶಿ |
| 5 | ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ | ಸದಸ್ಯರು |
| 6 | ಉಪ ನಿರ್ದೇಶಕರು, ರೇಷ್ಮೆ ಇಲಾಖೆ | ಸದಸ್ಯರು |
| 7 | ಜಿಲ್ಲಾ ಸಾಂಖ್ಯಿಕ ಅಧಿಕಾರಿ | ಸದಸ್ಯರು |
| 8 | ನೀರಾವರಿ ಇಲಾಖೆಯ ಅಧಿಕಾರಿ (ಬೃಹತ್) | ಸದಸ್ಯರು |

## ತಾಲ್ಲೂಕು ಮಟ್ಟದ ಸಮಿತಿ

| ಕ್ರ ಸಂ | ಹುದ್ದೆ ಮತ್ತು ಪದನಾಮ | ವಿವರ |
|---|---|---|
| 1 | ತಹಶೀಲ್ದಾರ್ | ಅಧ್ಯಕ್ಷರು |
| 2 | ಸಹಾಯಕ ಕೃಷಿ ನಿರ್ದೇಶಕರು | ಸದಸ್ಯ ಕಾರ್ಯದರ್ಶಿ |
| 3 | ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು | ಸದಸ್ಯರು |
| 4 | ರೇಷ್ಮೆ ಸಹಾಯಕ ನಿರ್ದೇಶಕರು | ಸದಸ್ಯರು |
| 5 | ಸಾಂಖ್ಯಿಕ ಅಧಿಕಾರಿಗಳು | ಸದಸ್ಯರು |
| 6 | ನೀರಾವರಿ ಇಲಾಖೆಯ ಅಧಿಕಾರಿ (ಬೃಹತ್) | ಸದಸ್ಯರು |

P. Satyabhama 3/8/2024

(ಪಿ. ಸತ್ಯಭಾಮ)

**ಸರ್ಕಾರದ ಅಧೀನ ಕಾರ್ಯದರ್ಶಿ**

**ಕೃಷಿ ಇಲಾಖೆ(ಯೋಜನೆ)**

3/8